ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಮಂಗಳವಾರ ೧೮, ನವೆಂಬರ್, ೨೦೨೫ (ಕಾರ್ತಿಕಾ, ೨೭, ಶಕವರ್ಷ, ೧೯೪೭) BENGALURU, TUESDAY 18, NOVEMBER, 2025 (KARTHIKA, 27, SHAKAVARSHA, 1947)	ಸಂಚಿಕೆ ೨೧೮ Issue 218

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

PROCEEDINGS OF THE GOVERNMENT OF KARNATAKA

Subject: State transmission projects to be taken-up under Tariff Based Competitive Bidding process based on the recommendation of "State Empowered Committee on Transmission" in its 7th meeting held on 29.08.2025 - reg

Read:
1. Ministry of Power (MoP), Government of India (GoI) Guidelines on "Encourage competition in development of Transmission Projects" and "TBCB Guidelines for Transmission service" dated 10.08.2021.
2. KERC (Multi Year Transmission, Distribution and Retail Supply Tariff) Regulations Notification dated 24.06.2024
3. GO.: EN 124 VSC 2024 dated 01.08.2024 constituting "State Empowered Committee on Transmission"
4. G.O.: ENERGY 73 PPT 2024 dated 20.01.2025 & CORRIGENDUM dated 18.10.2025 on nomination of Nodal agency, BPC and constitution of Cost Committee and Bid Opening & Evaluation Committees for implementation of InSTS projects in the State of Karnataka through TBCB process.
5. G.O.: ENERGY 73 PPT 2024 dated 16.05.2025
6. Proceedings of the 7th meeting of "State Empowered Committee on Transmission" held on 29.08.2025.
7. KPTCL file No. KPTCL/PNC/13/2025 dated 10.10.2025

*****

Preamble: -

Whereas, Government vide order read at (3) above has constituted "State Empowered Committee on Transmission" for deciding Intra-State Transmission projects to be taken-up under tariff based competitive bidding (TBCB).

Whereas, in the 7th meeting of State Empowered Committee on Transmission held on 29.08.2025 action of KPTCL to nominate M/s PFC Consulting Limited (PFCCL) as Bid Process Co-ordinator (BPC) in addition to M/s REC Power Development and Consultancy Limited (RECPDCL) has been ratified. Further, in the said meeting, committee while concurring following 08 InSTS projects for development / implementation through TBCB process has indicated allocation of projects among BPCs and further recommended for issuance of Government Order.

Sl. no.	Transmission Scheme / Project	BPC
01	765kV Hiriyur in Chitradurga District.	RECPDCL
02	400kV Kottur in Vijayanagara District.	
03	400kV Holalkere in Chitradurga District.	
04	400kV PD Kote in Chitradurga District.	
05	400kV Hebbani in Mandya District.	PFCCL
06	400kV Humnabad in Bidar District.	
07	765kV Kushtagi in Koppal District.	
08	400kV Benchigere in Tumakuru District.	

Also, in the Government Order read at (5) above, based on the recommendations of 5th meeting of "State Empowered Committee on Transmission", approval was accorded to take-up 400kV Kempegowda Layout, 220kV Devanahalli (New), 220kV Hosakote (New) and 220kV Devanagundi projects under TBCB with M/s RECPDCL as BPC. Whereas, in the 7th meeting of "State Empowered Committee on Transmission" held on 29.08.2025 concurrence is given to combine the latter three projects of aforesaid four projects into one package as they are located near to each other and to float a single RFP so as to attract wider participation from bidders. In the file read at (7), Managing Director, KPTCL has proposed to include 220kV Kadugodi, Bengaluru project in the package comprising 220kV Devanahalli (New), 220kV Hosakote (New) and 220kV Devanagundi projects as it would lead to faster project implementation, subject to ratification in the ensuing meeting of State Empowered Committee on Transmission, and has requested for issuance of Government order for combining these four projects.

Government has examined the proposal, hence the following order.

GOVERNMENT ORDER NO. ENERGY 73 PPT 2024,
BENGALURU, DATED: 18.10.2025

In the circumstances explained in the preamble, Government is pleased to accord approval for following InSTS projects for execution under TBCB process with M/s RECPDCL and M/s PFCCL as BPCs for the projects indicated against their name.

Sl. no.	Transmission Scheme / Project	BPC
01	765kV Hiriyur in Chitradurga District.	RECPDCL
02	400kV Kottur in Vijayanagara District.	
03	400kV Holalkere in Chitradurga District.	
04	400kV PD Kote in Chitradurga District.	
Sl. no.	**Transmission Scheme / Project**	**BPC**
05	400kV Hebbani in Mandya District.	PFCCL
06	400kV Humnabad in Bidar District.	
07	765kV Kushtagi in Koppal District.	
08	400kV Benchigere in Tumakuru District.	

Also, subject to ratification in State Empowered Committee on Transmission, **approval is accorded to combine projects in Bengaluru viz. 220kV Kadugodi, 220kV Devanahalli (New), 220kV Hosakote (New) and 220kV Devanagundi projects into one package and to float a single RFP with RECPDCL as BPC.** All other contents of Government Order ENERGY 73 PPT 2024 dated 16.05.2025 will remain unaltered.

All the above projects shall be developed/implemented duly complying to TBCB guidelines notified by Ministry of Power, Government of India from time to time.

BY ORDER AND IN THE NAME OF
GOVERNOR OF KARNATAKA

(**VINOD KUMAR D. M.**)
UNDER SECRETARY TO GOVERNMENT
ENERGY DEPARTMENT

PR-249

Government of Karnataka

No.: ENERGY 73 PPT 2024

Karnataka Government Secretariat,
Vikasa Soudha,
Dr. B. R. Ambedkar Veedhi,
Bengaluru, Date: 18.10.2025

CORRIGENDUM

*****

In order portion of Government order ENERGY 73 PPT 2024, dated: 20.01.2025 the words at para 3 -

"KPTCL is authorized to appoint a Bid Process Co-Ordinator (BPC) for a period of two years for all Intra-State Transmission projects to be executed through TBCB by inviting tender."

shall be read as

"KPTCL is authorized to appoint, through tender process, one or more entity as Bid Process Co-ordinator (s) for conducting the bid process of Intra-State Transmission System (InSTS) projects in accordance with TBCB guidelines notified by Ministry of Power, Government of India from time to time. KPTCL shall submit proposal to "State Empowered Committee on Transmission" for allocation of projects among the appointed BPC(s).

All other contents of the said Government order shall remain unchanged.

BY ORDER AND IN THE NAME OF
GOVERNOR OF KARNATAKA,

(**Vinod Kumar D. M.**)
UNDER SECRETARY TO GOVERNMENT,
ENERGY DEPARTMENT.

PR-250

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಬಿ. ಆರ್. ಮಮತ, ಜಂಟಿ ನಿರ್ದೇಶಕರು (ಸ್ವತಂತ್ರ ಪ್ರಭಾರ) ಇವರಿಗೆ ಪೂರ್ವಾನ್ವಯವಾಗುವಂತೆ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡುವ ಬಗ್ಗೆ.

*****

ಓದಲಾಗಿದೆ:

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಸಂವಾಪ್ರ 38 ವಾಪ್ರಸಿ 2011, ದಿನಾಂಕ:30/06/2011
2. ಡಾ: ಬಿ. ಆರ್. ಮಮತ ರವರ ಮನವಿ ದಿನಾಂಕ:08/04/2024.
3. ಸರ್ಕಾರದ ಪತ್ರ ಸಂಖ್ಯೆ: ಕೆಸಿಐ/ವಿಪಿಎಸ್ಐ/51/2020, ದಿನಾಂಕ:12/06/2024.
4. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರವರ ಪತ್ರ ಸಂಖ್ಯೆ:ವಾಸಾಸಂಇ/ಇಎಪಿ(ಎನ್)/ಇ1/2024-25/3195, ದಿನಾಂಕ:18/06/2024.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಅಧಿಸೂಚನೆಯಲ್ಲಿ ಶ್ರೀಮತಿ ಬಿ.ಆರ್. ಮಮತ, ಉಪ ನಿರ್ದೇಶಕರು, ವಾರ್ತಾ ಇಲಾಖೆ ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವಾರ್ತಾ ಇಲಾಖೆಯ ರೂ.20,025-28,275/- ರ ವೇತನ ಶ್ರೇಣಿಯ ಜಂಟಿ ನಿರ್ದೇಶಕರ ಹುದ್ದೆಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿ ನೇಮಿಸಿ ಇವರನ್ನು ಮುಂದಿನ

ಆದೇಶದವರೆಗೆ ವಾರ್ತಾ ಇಲಾಖೆಯಲ್ಲಿ ಶ್ರೀ ಎಂ.ಜಿ.ಕೆಳಗಡೆ ಇವರ ನಿವೃತ್ತಿಯಿಂದ ತೆರವಾದ ಜಂಟಿ ನಿರ್ದೇಶಕರು ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಮನವಿಯಲ್ಲಿ ಡಾ: ಬಿ.ಆರ್. ಮಮತ ರವರು ತಮಗೆ ಜಂಟಿ ನಿರ್ದೇಶಕರ ಹುದ್ದೆಗೆ ದಿನಾಂಕ:01/06/2012ರಿಂದ ಅನ್ವಯವಾಗುವಂತೆ ಸ್ಥಾನಪನ್ನ ಮುಂಬಡ್ತಿ ನೀಡುವಂತೆ ಕೋರಿದ್ದು, ಅವರ ಮನವಿಯ ವಿವರಗಳು ಕೆಳಕಂಡಂತಿವೆ:

ಡಾ: ಬಿ.ಆರ್. ಮಮತ ರವರು ವಾರ್ತಾ ಇಲಾಖೆಯ ಗ್ರೂಪ್- ಬಿ ವೃಂದದ ಸಹಾಯಕ ನಿರ್ದೇಶಕರ ಹುದ್ದೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಸರ್ಕಾರದ ಆದೇಶ ಸಂಖ್ಯೆ: ಐಟಿಐ 175 ವಾಪ್ರಸಿ 84, ದಿನಾಂಕ:16/06/1990ರಲ್ಲಿ ನೇಮಕಗೊಂಡು, ಸದರಿ ಹುದ್ದೆಗೆ ವರದಿ ಮಾಡಿಕೊಂಡಿರುತ್ತಾರೆ. ತದ ನಂತರ ಕ್ರಮವಾಗಿ ಹಿರಿಯ ಸಹಾಯಕ ನಿರ್ದೇಶಕರು ಮತ್ತು ಉಪ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ಹೊಂದಿದ್ದು, ನಂತರ ಸದರಿಯವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಸಂವಾಪ್ರ 38 ವಾಪ್ರಸಿ 2011, ದಿನಾಂಕ:30/06/2011ರಲ್ಲಿ ಶ್ರೀ ಎಂ.ಜಿ.ಕೆಳಗಡೆ, ಜಂಟಿ ನಿರ್ದೇಶಕರು, ಇವರ ವಯೋ ನಿವೃತ್ತಿಯಿಂದ ತೆರವಾದ ಜಂಟಿ ನಿರ್ದೇಶಕರ ಹುದ್ದೆಗೆ ದಿನಾಂಕ:30/06/2011ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿ ನೇಮಕ ಮಾಡಲಾಗಿದೆ. ಆದರಂತೆ ದಿ:04/07/2011ರಂದು ಸದರಿ ಹುದ್ದೆಗೆ ಕಾರ್ಯವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸಿರುತ್ತಾರೆ.

ನಂತರದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 426 SAS 2015, ದಿನಾಂಕ:12/06/2015ರಂತೆ ಭಾ.ಆ.ಸೇ. ಹುದ್ದೆಗೆ ಪದೋನ್ನತಿ ಪಡೆದು ವಾರ್ತಾ ಇಲಾಖೆಯಿಂದ ಬಿಡುಗಡೆಗೊಂಡಿರುತ್ತಾರೆ.

ಸರ್ಕಾರದ ದಿನಾಂಕ:28/05/2018ರ ಅಧಿಸೂಚನೆಯಲ್ಲಿ ಜಂಟಿ ನಿರ್ದೇಶಕರ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಾಗೂ ಉಪ ನಿರ್ದೇಶಕರ ವೃಂದದಲ್ಲಿ ಜೇಷ್ಠತೆಯಲ್ಲಿ ಕಿರಿಯರಾದ ಇಬ್ಬರು ಉಪ ನಿರ್ದೇಶಕರುಗಳಿಗೆ ಸ್ಥಾನಪನ್ನ ಮುಂಬಡ್ತಿ ನೀಡಲಾಗಿರುತ್ತದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸ್ಪಷ್ಟವಾಗಿ 04 ಜಂಟಿ ನಿರ್ದೇಶಕರ ಹುದ್ದೆಗಳು ಮಂಜೂರಾಗಿದ್ದು, ಈ ಹುದ್ದೆಗಳಲ್ಲಿ ಒಂದು ಜಂಟಿ ನಿರ್ದೇಶಕರ ಹುದ್ದೆಯು ಶ್ರೀ ಕೆ.ಎಸ್. ಬೇವಿನ ಮರದ ಇವರು ದಿನಾಂಕ:30/05/2012 ರಂದು ವಯೋನಿವೃತ್ತಿ ಹೊಂದಿದ ದಿನಾಂಕದಿಂದ ರಿಕ್ತವಾಗಿರುತ್ತದೆ (Clear vacancy). ಆದಕಾರಣ The Karnataka State Civil Services (Regulation of Promotion, Pay and Pension) Rules, 1978, Rule (2) Sub Rule (3)ರನ್ವಯ ತಮಗೆ ದಿನಾಂಕ:01.06.2012ರಿಂದ ಪೂರ್ವಾನ್ವಯವಾಗುವಂತೆ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡುವಂತೆ ಡಾ: ಬಿ.ಆರ್. ಮಮತ ರವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಸರ್ಕಾರಿ ಪತ್ರದಲ್ಲಿ ಡಾ: ಬಿ.ಆರ್. ಮಮತ, ಭಾ.ಆ.ಸೇ., ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಇವರ ಮನವಿಯ ಮೇರೆಗೆ, ಹಿಂದೆ ವಾರ್ತಾ ಇಲಾಖೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿ ಜಂಟಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ತಮಗೆ ಬರಬೇಕಾಗಿದ್ದ ಜಂಟಿ ನಿರ್ದೇಶಕರ ಹುದ್ದೆಯ ಸ್ಥಾನಪನ್ನ ಮುಂಬಡ್ತಿಯನ್ನು ದಿ:01/06/2012ರಿಂದ ಪೂರ್ವಾನ್ವಯವಾಗಿ ನೀಡುವಂತೆ ಕೋರಿದ್ದು, ಈ ಬಗ್ಗೆ ಅಗತ್ಯ ಮಾಹಿತಿಗಳನ್ನು ಒದಗಿಸುವಂತೆ ಆಯುಕ್ತರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆರವರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ಪತ್ರದಲ್ಲಿ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆರವರು ವಿವರವಾದ ಮಾಹಿತಿ ನೀಡುತ್ತಾ, ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸ್ಪಷ್ಟವಾಗಿ ನಾಲ್ಕು ಜಂಟಿ ನಿರ್ದೇಶಕರ ಹುದ್ದೆಗಳು ಮಂಜೂರಾಗಿರುತ್ತವೆ. ಶ್ರೀ ಎಂ. ಜಿ. ಕೆಳಗಡೆ ಇವರ ವಯೋನಿವೃತ್ತಿಯಿಂದ ತೆರವಾದ ಒಂದು ಜಂಟಿ ನಿರ್ದೇಶಕರ ಹುದ್ದೆಗೆ ಶ್ರೀಮತಿ ಬಿ.ಆರ್.ಮಮತ ಇವರಿಗೆ ಆಡಳಿತಾತ್ಮಕ ದೃಷ್ಟಿಯಿಂದ ನಿಯಮ-32ರಡಿ ಸರ್ಕಾರ ನೇಮಕ ಮಾಡಿದೆ. ತದನಂತರ, ಶ್ರೀ ಕೆ.ಎಸ್. ಬೇವಿನಮರದ, ಜಂಟಿ ನಿರ್ದೇಶಕರು, ಇವರು ಸರ್ಕಾರಿ ಸೇವೆಯಿಂದ ದಿನಾಂಕ:30/05/2012ರಂದು ವಯೋನಿವೃತ್ತಿ ಹೊಂದಿದ ನಂತರ ಇಲಾಖೆಯಲ್ಲಿ ಲಭ್ಯವಿದ್ದ 04 ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಈ ಕೆಳಕಂಡವರು ಕರ್ತವ್ಯ ನಿರ್ವಹಿಸುತ್ತಿದ್ದರು.

1. ಎಂ. ರವಿಕುಮಾರ್ - ಸ್ಥಾನಪನ್ನ
2. ಆರ್.ಕೆ.ಶಿವರಾಮ್ - ನಿಯಮ 32 ರಡಿ
3. ಎನ್. ಭೃಂಗೀಶ್ - ನಿಯಮ 32 ರಡಿ
4. ಡಾ: ಬಿ.ಆರ್. ಮಮತ - ನಿಯಮ 32 ರಡಿ

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಡಾ: ಬಿ.ಆರ್. ಮಮತ ಇವರು ದಿನಾಂಕ:08/04/2024ರ ತಮ್ಮ ಮನವಿಯಲ್ಲಿ ಕೋರಿರುವಂತೆ ಇವರಿಗೆ ದಿನಾಂಕ:01/06/2012ರಿಂದ ಪೂರ್ವಾನ್ವಯವಾಗುವಂತೆ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರದ ಹಂತದಲ್ಲಿ ಇಲಾಖಾ ಮುಂಬಡ್ತಿ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ ಎಂದು ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರವರು ತಿಳಿಸಿರುತ್ತಾರೆ.

ಸರ್ಕಾರಿ ನೌಕರರಿಗೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ನಿಯಮಗಳು, 1978ರ ನಿಯಮ 2 (3)ರಲ್ಲಿ ಅವಕಾಶ ಕಲ್ಪಿಸಲಾಗಿರುವ ಹಿನ್ನೆಲೆಯಲ್ಲಿ ಪರಿಶೀಲಿಸಿ, ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆಗಳ ಅಭಿಪ್ರಾಯವನ್ನು ಪಡೆದು, ಅದರನ್ವಯ ಡಾ: ಬಿ.ಆರ್. ಮಮತರವರು ಇಲಾಖೆಯ ಜೇಷ್ಟತಾ ಪಟ್ಟಿಯನ್ವಯ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ, ಜಂಟಿ ನಿರ್ದೇಶಕರ ಹುದ್ದೆಗೆ (ಶ್ರೀ ಕೆ.ಎಸ್. ಬೇವಿನಮರದ, ಜಂಟಿ ನಿರ್ದೇಶಕರು, ಇವರು ಸರ್ಕಾರಿ ಸೇವೆಯಿಂದ ದಿನಾಂಕ:30/05/2012ರಂದು ವಯೋನಿವೃತ್ತಿ ಹೊಂದಿದ ನಂತರ ತೆರವಾದ ಹುದ್ದೆ) ದಿನಾಂಕ: 01/06/2012ರಿಂದ ಅರ್ಹರಿರುವುದರಿಂದ ಸದರಿ ಅಧಿಕಾರಿಯವರಿಗೆ ಪೂರ್ವಾನ್ವಯವಾಗಿ ಜಂಟಿ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡುವ ಕುರಿತು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಕೆಸಿಐ-ವಿಪಿಎಸ್ಐ/51/2020,</u>
<u>ಬೆಂಗಳೂರು, ದಿನಾಂಕ:23/10/2025</u>.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾ: ಬಿ.ಆರ್, ಮಮತ, ಜಂಟಿ ನಿರ್ದೇಶಕರು (ಸ್ವತಂತ್ರ ಪ್ರಭಾರ) ಇವರಿಗೆ ಕರ್ನಾಟಕ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ನಿಯಮಗಳು, 1978ರ ನಿಯಮ 2 (3)ರನ್ವಯ, ದಿನಾಂಕ:01/06/2012 ರಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಇಲಾಖೆಯ ಜಂಟಿ ನಿರ್ದೇಶಕರ ಹುದ್ದೆಗೆ (2012ರ ಪರಿಷ್ಕೃತ ವೇತನ ಶ್ರೇಣಿ 40050-56550) ಸ್ಥಾನಪನ್ನ ಮುಂಬಡ್ತಿ ನೀಡಿ ಆದೇಶಿಸಿದೆ. ಸದರಿ ಅಧಿಕಾರಿಯವರು ಕರ್ನಾಟಕ ಸಿವಿಲ್ ಸೇವೆ (ಬಡ್ತಿ, ವೇತನ ಮತ್ತು ನಿವೃತ್ತ ವೇತನದ ವಿನಿಯಮನ) ಅಧಿನಿಯಮ 1973ರ ಕಲಂ 4 ಮತ್ತು ಅನ್ವಯಿಸುವ ಇತರೆ ಉಪಬಂಧಗಳನ್ವಯ ವೇತನ ಬಾಕಿ ಪಡೆಯಲು ಅರ್ಹರಿರುವುದಿಲ್ಲ. ಆದರೆ ಪದೋನ್ನತಿಯ ಕಾರಣದಿಂದಾಗಿ ಪುನರ್

ನಿಗದಿಪಡಿಸಲಾದ ವೇತನದ ಆಧಾರದ ಮೇಲೆ ಪುನರ್ ನಿಗದಿಗೊಳ್ಳುವ ಪಿಂಚಣಿಯ ಪರಿಷ್ಕರಣೆಯ ಲಾಭವನ್ನು ಮಾತ್ರ ಪಡೆಯಲು ಅರ್ಹರಿರುತ್ತಾರೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 853 EXP-7/2024, ದಿನಾಂಕ:04-02-2025/03-03-2025ರಲ್ಲಿ ಮತ್ತು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯು ಟಿಪ್ಪಣಿ ಸಂಖ್ಯೆ: LAW-OPN/741/2025 ದಿನಾಂಕ:30/09/2025ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಜೆಸಿಂತ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
(ವಾರ್ತಾ ಶಾಖೆ)

PR-251

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ- ಕೆಲವು ಹುದ್ದೆಗಳನ್ನು ಮರುಪದನಾಮೀಕರಣ ಮತ್ತು ರದ್ದುಗೊಳಿಸುವ ಕುರಿತು.

ಓದಲಾಗಿದೆ: 1. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಪತ್ರ ಸಂಖ್ಯೆ:ವಾಸಾಸಂಇ/ಇಎಂಎಂ/ಇ8/03/ಭಾಗ-5/2022-23/6534 ದಿನಾಂಕ:20/10/2023
2. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ723/ವೆಚ್ಚ-7/2025 ದಿ: 26/8/2025 ರೊಂದಿಗೆ ಸ್ವೀಕರಿಸಲಾಗಿರುವ ಸೇವೆಗಳು-3 ಶಾಖೆಯ ಹಿಂಬರಹ ಸಂಖ್ಯೆ: ಆಇ 386 ಸೇ-3/2023 ದಿನಾಂಕ:16/8/2025
3. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಪತ್ರ ಸಂಖ್ಯೆ:ಡಿಐಪಿಆರ್/ ಇ8/2025-26/7152 ದಿ: 03/10/2025

-@@@-

<u>ಪ್ರಸ್ತಾವನೆ</u>:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪ್ರಸ್ತಾವನೆಯಲ್ಲಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರು, ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಸರ್ಕಾರದ ಅಧಿಸೂಚನೆ ಸಂ: ಹೆಚ್‌ಡಿ 143 ಪಿಐಇ 73 ದಿ.21/04/1975 ಮತ್ತು ಅಧಿಸೂಚನೆ ಸಂಖ್ಯೆ: ಹೆಚ್‌ಡಿ 36 ಪಿಐಇ 75 ದಿ.16/02/1978ರಲ್ಲಿ ಹೊರಡಿಸಲಾಗಿದ್ದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ, ಸಮಗ್ರ ಪರಿಷ್ಕರಣೆ ಮಾಡುವಂತೆ ಕೋರಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಹಿಂಬರಹದಲ್ಲಿ ಆರ್ಥಿಕ ಇಲಾಖೆಯು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಕುರಿತು ಪರಿಶೀಲಿಸಿದ್ದು, ಆಯುಕ್ತಾಲಯದ 9 ವೃಂದದ ಹುದ್ದೆಗಳನ್ನು (ಅನುಬಂಧ-2) ಮರುಪದನಾಮೀಕರಿಸಲು ಹಾಗೂ 9 ವೃಂದದ 57 ಹುದ್ದೆಗಳನ್ನು (ಅನುಬಂಧ-3) ರದ್ದುಪಡಿಸಲು ಸಹಮತಿ ನೀಡುತ್ತಾ, ಈ ರೀತಿ ಆಡಳಿತ ಇಲಾಖೆಯು ಆದೇಶ ಹೊರಡಿಸಿದ ನಂತರದಲ್ಲಿ ಅನುಬಂಧ-1ರಂತೆ 40 ವೃಂದದ ಒಟ್ಟು 581 ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪರಿಷ್ಕರಿಸಿ ಅಳವಡಿಸಲು ಸಹಮತಿ ನೀಡಿರುತ್ತದೆ.

ಮೇಲೆ ಓದಲಾದ (3)ರ ಪತ್ರದಲ್ಲಿ, ವಾರ್ತಾ ಇಲಾಖೆಯ ಆಯುಕ್ತರು, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಪರಿಶೀಲಿಸಿ, ಆರ್ಥಿಕ ಇಲಾಖೆಯ ಸಹಮತಿಯನ್ವಯ ಅನುಬಂಧ-2ರಂತೆ ಹುದ್ದೆಗಳ ಮರುಪದನಾಮಿಕರಣಕ್ಕೆ ಹಾಗೂ ಅನುಬಂಧ-3ರಂತೆ ಹುದ್ದೆಗಳ ರದ್ದತಿ ಕುರಿತು ಇಲಾಖೆಯ ಸಹಮತಿ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಕೆಸಿಐ-ವಿಪಿಎಸ್ ಐ/51/2022,(ಭಾಗ-4) ಬೆಂಗಳೂರು, ದಿನಾಂಕ:23/10/2025

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಬಗ್ಗೆ ಆರ್ಥಿಕ ಇಲಾಖೆಯು ಪರಿಶೀಲಿಸಿ, ನೀಡಿರುವ ಸಹಮತಿ ಮೇರೆಗೆ ಈ ಕೆಳಕಂಡಂತೆ 9 ವೃಂದದ ಹುದ್ದೆಗಳನ್ನು ಮರುಪದನಾಮೀಕರಿಸಲಾಗಿ ಹಾಗೂ 9 ವೃಂದದ ಒಟ್ಟು 57 ಹುದ್ದೆಗಳನ್ನು ರದ್ದುಪಡಿಸಿ ಆದೇಶಿಸಲಾಗಿದೆ.

ಮರುಪದನಾಮೀಕರಿಸಿದ ಹುದ್ದೆಗಳು

ಕ್ರ.ಸಂ	ಹುದ್ದೆ & ವೇತನ ಶ್ರೇಣಿ	ಮಂಜೂರಾತಿ ಸಂಖ್ಯೆ (P & T)	ಮರುಪದನಾಮೀಕರಿಸಿದ ಹುದ್ದೆ & ವೇತನ ಶ್ರೇಣಿ	ಮಂಜೂರಾತಿ ಸಂಖ್ಯೆ
1	ಹಾಡು & ನಾಟಕ ಅಧಿಕಾರಿ Song & Drama Officer 83700-155200	01	ಕ್ಷೇತ್ರ ಪ್ರಚಾರಾಧಿಕಾರಿ Field Publicity Officer 83700-155200	01
2	ರೇಡಿಯೋ ಅಭಿಯಂತರರು Radio Engineer 69250-134200	01	ಸಹಾಯಕ ಶ್ರವಣ ಮತ್ತು ದೃಶ್ಯ ಅಭಿಯಂತರರು Assistant Audio & Visual Engineer 69250-134200	01
3	ತಾಂತ್ರಿಕ ಅಧಿಕಾರಿ (ಎಸ್.ಒ) Technical officer(SO) 65950-124900	01	ತಾಂತ್ರಿಕ ಅಧಿಕಾರಿ Technical officer(Films) 65950-124900	01
4	ತಾಂತ್ರಿಕ ಸಹಾಯಕ Technical Assistant 65950-124900	01	ತಾಂತ್ರಿಕ ಅಧಿಕಾರಿ (ಶ್ರವಣ & ದೃಶ್ಯ) Technical Officer (Audio & visual) 65950-124900	01
5	ಮೊದಲನೇ ದರ್ಜೆ ಕ್ಲರ್ಕ್ First Division Clerk 44425-83700	21+43	ಪ್ರಥಮ ದರ್ಜೆ ಸಹಾಯಕರು/ ಉಗ್ರಾಣ ಪಾಲಕರು First Division Assistant/ Store Keeper 44425-83700	64

6	ಹಿರಿಯ ಬೆರಳಚ್ಚುಗಾರರು Senior Typist 44425-83700	03	ಹಿರಿಯ ದತ್ತಾಂಶ ನಮೂದಕರು Senior Data Entry Assistant 44425-83700	03
7	ಬೆರಳಚ್ಚುಗಾರರು Typist 34100-67600	18+20	ದತ್ತಾಂಶ ನಮೂದಕರು Data Entry Assistant 34100-67600	38
8	ಸ್ವಾಗತಕಾರರು Receptionist 44425-83700	21+3	ಸ್ವಾಗತಕಾರರು-ಕಂ-ಗ್ರಂಥಪಾಲಕರು Receptionist cum Librarian 44425-83700	24
9	ಪಿವನ್/ವಾಚ್ ಮ್ಯಾನ್/ಲೈಟ್ ಅಸಿಸ್ಟೆಂಟ್/ವಾಹನ ಸ್ವಚ್ಛಕಾರರು Peon/Watchman/ Light Assistant /Vehicle Cleaners 27000-46675	113+22	ಗ್ರೂಪ್ ಡಿ Group D 27000-46675	135

ರದ್ದುಪಡಿಸಿದ ಹುದ್ದೆಗಳು

ಕ್ರ.ಸಂ	ಹುದ್ದೆ & ವೇತನ ಶ್ರೇಣಿ	ಮಂಜೂರಾತಿ ಸಂಖ್ಯೆ
1	ಮುಖ್ಯ ವರದಿಗಾರ Chief Reporter 65950-124900	01
2	ಲೆಕ್ಕಪತ್ರ ಅಧೀಕ್ಷಕರು Accounts Superintendent 65950-124900	01
3	ವಿಡಿಯೋ ಕ್ಯಾಮೆರಾಮೆನ್ Video Cameraman 61300-112900	01
4	ಅಧೀಕ್ಷಕರು Superintendent 61300-112900	01
5	ವಿಡಿಯೋ ಫಿಲಂ ಸಂಪಾದಕ/ ಛಾಯಾಗ್ರಾಹಕ Video Film Editor/Photographer 54175-99400	01
6	ಕಲಾವಿದ Artist 54175-99400	06

7	ಕಿರಿಯ ಕಲಾವಿದ Junior Artist 44425-83700	01
8	ದ್ವಿತೀಯ ದರ್ಜೆ ಸಹಾಯಕ Second Division Assistant 34100-67600	29
9	ಅಂಟೆಂಡರ್ /ದಫೇದಾರ್/ ರೋನಿಯೋ ಆಪರೇಟರ್ Attender/Daffedar /Roneo Operator 31775-61300	16
	ಒಟ್ಟು	**57**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಜೆಸಿಂತ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ,
(ವಾರ್ತಾ ಶಾಖೆ)

PR-252

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 10 ಕೆಒಎಲ್ ಆಕ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಡಾ|| ಬಿ.ಆರ್ ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 27.10.2025

ಸೇರ್ಪಡೆ

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 10 ಕೆಒಎಲ್ ಆಕ 2025, ದಿನಾಂಕ: 10.09.2025ರ ಆದೇಶ ಭಾಗದ ಎರಡನೇ ಕಂಡಿಕೆಯ ನಂತರ ಈ ಕೆಳಕಂಡಂತೆ ಸೇರ್ಪಡೆಗೊಳಿಸಿ ಆದೇಶಿಸಿದೆ.

"ರಾಜ್ಯದ ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಹಾಗೂ ಸರ್ಕಾರದ ಭಾಷಾ ನೀತಿಯ ಅನುಷ್ಠಾನದಲ್ಲಿ ಜನರು ಪಾಲ್ಗೊಳ್ಳುವಂತೆ ನೋಡಿಕೊಳ್ಳಲು ನೂತನವಾಗಿ ನೇಮಕಗೊಂಡಿರುವ ಕನ್ನಡ ಜಾಗೃತಿ ಸಮಿತಿ ಸದಸ್ಯರುಗಳ ಕಾರ್ಯವ್ಯಾಪ್ತಿ ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸಲಾಗಿದೆ.

1. ಕನ್ನಡ ಜಾಗೃತಿ ಸಮಿತಿಗಳು ತಮ್ಮ ತಮ್ಮ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕನ್ನಡ ಅಭಿವೃದ್ಧಿಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಡಳಿತದ ನಿಯಂತ್ರಣದಲ್ಲಿ ಹಾಗೂ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವುದು.

2. ಕನ್ನಡ ಬಳಕೆಯ ಅನುಷ್ಠಾನದ ಜವಾಬ್ದಾರಿ ಹೊಂದಿರುವ ಅಧಿಕಾರಿಗಳೆಲ್ಲರಿಗೆ ಪೂರಕವಾಗಿ ಕೆಲಸ ಮಾಡುವುದು ಜಾಗೃತಿ ಸಮಿತಿ ಸದಸ್ಯರ ಕರ್ತವ್ಯವಾಗಿದೆ.

3. ಯಾವುದೇ ಜಾಗೃತಿ ಸಮಿತಿ ಸದಸ್ಯರು ತಾವಾಗಿಯೇ ಯಾವುದೇ ಕಚೇರಿಯ ಪರಿಶೀಲನೆಗೆ ತೆರಳುವಂತಿಲ್ಲ. ಆಡಳಿತದಲ್ಲಿ ಕನ್ನಡವು ಯಾವುದೇ ಕಚೇರಿಯಲ್ಲಿ ಸಮರ್ಪಕವಾಗಿ ಬಳಕೆಯಾಗದೇ ಇರುವ ಬಗ್ಗೆ, ತಿಳಿದುಬಂದಾಗ ಸದರಿ ವಿಷಯವನ್ನು ಆಯಾ ಜಾಗೃತಿ ಸಮಿತಿ ಅಧ್ಯಕ್ಷರ ಗಮನಕ್ಕೆ ತಂದು ಕ್ರಮಕ್ಕಾಗಿ ಆಗ್ರಹಿಸುವುದು.

4. ಪ್ರತಿ ಕನ್ನಡ ಜಾಗೃತಿ ಸಮಿತಿಗಳು ಸಾಮಾನ್ಯವಾಗಿ ಪ್ರತಿ ಆರ್ಥಿಕ ವರ್ಷದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು. ಪ್ರತಿ ಬಾರಿ ಸಭೆಯನ್ನು ಆಯೋಜಿಸುವ ಜವಾಬ್ದಾರಿಯನ್ನು ಸಂಬಂಧಪಟ್ಟ ಸಮಿತಿಗಳ ಸದಸ್ಯ ಕಾರ್ಯದರ್ಶಿಗಳು ಹೊಂದಿರುತ್ತಾರೆ.

5. ಸಮಿತಿಗಳು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022ರ ಸಮರ್ಪಕ ಅನುಷ್ಠಾನದ ಜವಾಬ್ದಾರಿಯನ್ನು ಸಹ ಹೊಂದಬೇಕಾಗಿದ್ದು, ಅಧಿನಿಯಮದಲ್ಲಿ ಪ್ರಸ್ತುತವಾಗಿರುವ ವಿಷಯಗಳ ಕುರಿತಂತೆ ಪ್ರತಿ ಬಾರಿ ಚರ್ಚಿಸಿ ಸಭಾ ನಡವಳಿಗಳಲ್ಲಿ ದಾಖಲಿಸಬೇಕಾಗಿರುತ್ತದೆ.

6. ಜಾಗೃತಿ ಸಮಿತಿ ಸದಸ್ಯರ ಸಭಾ ನಡವಳಿಗಳನ್ನು ಸಂಬಂಧಪಟ್ಟ ಸಮಿತಿಗಳ ಸದಸ್ಯ ಕಾರ್ಯದರ್ಶಿಗಳು ದಾಖಲಿಸಿ ಸಭಾಧ್ಯಕ್ಷರ ಅನುಮೋದನೆಯನ್ನು ಪಡೆಯತಕ್ಕದ್ದು.

7. ಸಭಾ ನಡವಳಿಗಳನ್ನು ಸಂಬಂಧಿತ ಎಲ್ಲಾ ಸದಸ್ಯರುಗಳಿಗೆ ಕಳುಹಿಸುವುದಲ್ಲದೇ, ಅನುಪಾಲನೆಯನ್ನು ನಿರ್ವಹಿಸತಕ್ಕದ್ದು.

8. ಜಾಗೃತಿ ಸಮಿತಿ ಸದಸ್ಯರ ನಡವಳಿಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ, ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಕಡ್ಡಾಯವಾಗಿ ಸಲ್ಲಿಸಬೇಕು.

9. ಕನ್ನಡ ಅನುಷ್ಠಾನದಲ್ಲಿ ಗಂಭೀರ ಲೋಪದೋಷಗಳು ಕಂಡುಬರುತ್ತಿದ್ದ ಸಂದರ್ಭದಲ್ಲಿ ಜಾಗೃತಿ ಸಮಿತಿ ಸದಸ್ಯರು ತಮ್ಮ ವ್ಯಾಪ್ತಿಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರೇತರ ಸದಸ್ಯರೊಂದಿಗೆ ಜೊತೆಗೂಡಿ ಸಮಿತಿ ಅಧ್ಯಕ್ಷರಿಗೆ ಪತ್ರಮುಖೇನ ಸರಿಪಡಿಸಲು ಆಗ್ರಹಿಸುವುದಲ್ಲದೆ, ಪ್ರತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

10. ಸಮಿತಿ ಸಭೆಯನ್ನು ಆಯೋಜಿಸುವ ಅಧಿಕಾರಿಗಳು ಜಾಗೃತಿ ಸಮಿತಿ ಸದಸ್ಯರುಗಳಿಗೆ ತಮ್ಮಲ್ಲಿ ಲಭ್ಯವಿರುವ ಅನುದಾನದಲ್ಲಿ ಸ್ಥಳೀಯ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಯನ್ನು ವಿತರಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

11. ಯಾವುದೇ ಜಾಗೃತಿ ಸಮಿತಿ ಸದಸ್ಯರುಗಳು ತಮ್ಮ ಸದಸ್ಯತ್ವದ ಪ್ರಭಾವವನ್ನು ಬೀರಿ ಸರ್ಕಾರಿ ಕಚೇರಿಗಳ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ.

12. ಸಮಿತಿಯ ಸದಸ್ಯತ್ವದ ರಬ್ಬರ್ ಮೊಹರುಗಳನ್ನಾಗಲಿ, ಭೇಟಿ ಚೀಟಿಗಳನ್ನಾಗಲಿ (ವಿಸಿಟಿಂಗ್ ಕಾರ್ಡ್) ಅಥವಾ ಶೀರ್ಷಿಕೆಯುಳ್ಳ ಪತ್ರಗಳನ್ನು (ಲೆಟರ್‌ಹೆಡ್) ಜಾಗೃತಿ ಸಮಿತಿ ಸದಸ್ಯರುಗಳು ಹೊಂದಿರತಕ್ಕದ್ದಲ್ಲ. ಅಂತೆಯೇ ತಾವು ಹೊಂದಿರುವ ವಾಹನಗಳ ಮೇಲೆ ಜಾಗೃತಿ ಸಮಿತಿ ಸದಸ್ಯರೆನ್ನುವ ಫಲಕಗಳನ್ನು (ಸ್ಟಿಕರ್) ಅಳವಡಿಸಿಕೊಳ್ಳತಕ್ಕದಲ್ಲ.

13. ಅಧಿಕಾರ ಮೀರಿ ವರ್ತಿಸುತ್ತಿದ್ದಾರೆನ್ನುವ ಮಾಹಿತಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ತಲುಪಿದಲ್ಲಿ ಸದಸ್ಯತ್ವದಿಂದ ತೆಗೆದುಹಾಕುವ ತೀರ್ಮಾನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಹೊಂದಿದೆ.

14. ಈ ಜಾಗೃತಿ ಸಮಿತಿ ಸದಸ್ಯರ ನೇಮಕಾತಿಯು ಪ್ರಸ್ತುತ ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಳ್ಳುವವರೆಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಮಾತ್ರ ಇರುತ್ತದೆ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ)

PR-253

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಕರಾವಳಿಯಲ್ಲಿರುವ ನಾಲ್ಕು ಹಾಲಿ ಬಂದರುಗಳಾದ (i)ಕಾರವಾರ (ii) ಹಳೇ ಮಂಗಳೂರು (ಬೇಂಗ್ರೆ ಬದಿ), (iii) ಹಳೇ ಮಂಗಳೂರು (ನಗರ ಬದಿ) ಮತ್ತು (iv)ಮಲ್ಪೆಯ ಬರ್ತ್‌ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಡಿ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT) ಆಧಾರದ ಮೇಲೆ ಅಭಿವೃದ್ಧಿ ಪಡಿಸಲು ಖಾಸಗಿ ಪಾಲುದಾರರಿಗೆ ವಹಿಸಿಕೊಡಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಇವರ ಪತ್ರ ಸಂಖ್ಯೆ:CEO,KMB-3/01/2019-20,ದಿನಾಂಕ: 24.03.2025

*****

ಪ್ರಸ್ತಾವನೆ:-

2024-25ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕರಾವಳಿ ತೀರ ಪ್ರದೇಶ ಹಾಗೂ ಬಂದರುಗಳ ಅಭಿವೃದ್ಧಿಯು ರಾಜ್ಯದ ಜಲಸಾರಿಗೆ ವಹಿವಾಟು ಹೆಚ್ಚಿಸಿ, ಉದ್ಯೋಗ ಸೃಜನೆಯ ಜೊತೆಗೆ, ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುತ್ತದೆ. ಈ ನಿಟ್ಟಿನಲ್ಲಿ ವಿವಿಧ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಬದ್ಧವಾಗಿದೆ ಎಂದು ಘೋಷಿಸಲಾಗಿರುತ್ತದೆ.

ಪ್ರಸ್ತುತ, ಕಾರವಾರ ಬಂದರಿನಲ್ಲಿ 355 ಮೀಟರ್ ಜೆಟ್ಟಿ ಇದ್ದು, ಇದನ್ನು ಕರ್ನಾಟಕ ಜಲಸಾರಿಗೆ ಮಂಡಳಿ (KMB) ನಿರ್ವಹಿಸುತ್ತಿದೆ, ಪ್ರತಿವರ್ಷ 3.5 ಮಿಲಿಯನ್ ಮೆಟ್ರಿಕ್ ಟನ್ (MMTPA) ಸರಕನ್ನು ನಿರ್ವಹಿಸುವ ಸಾಮರ್ಥ್ಯವಿದ್ದರೂ ಸಹ ಈ ಬಂದರನ್ನು ಪ್ರಸ್ತುತ ಕಡಿಮೆ ಪ್ರಮಾಣದಲ್ಲಿ ಬಳಸಲಾಗುತ್ತಿದೆ. 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕೇವಲ 0.55 MMTPA ಸರಕನ್ನಷ್ಟೇ ನಿರ್ವಹಿಸಲಾಗಿದೆ. ಪ್ರಸ್ತಾವಿತ ಯೋಜನೆಯು ಈ ಜೆಟ್ಟಿಯ 175 ಮೀಟರ್ ಭಾಗವನ್ನು PPP ಮಾದರಿಯಲ್ಲಿ ROMT ಆಧಾರದ ಮೇಲೆ ನಿರ್ವಹಿಸುವ ಉದ್ದೇಶವಿದ್ದು, ಉಳಿದ 180 ಮೀಟರ್‌ನ್ನು ಕರ್ನಾಟಕ ಜಲಸಾರಿಗೆ ಮಂಡಳಿಯು ನಿರ್ವಹಿಸುತ್ತಿದೆ, ಹಳೆಯ ಮಂಗಳೂರು ಬಂದರು (ನಗರದ ಭಾಗ) ದಲ್ಲಿ 320 ಮೀಟರ್ ಜೆಟ್ಟಿಯನ್ನು ಮುಖ್ಯವಾಗಿ ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶದ ಪ್ರಯಾಣಿಕರ ಮತ್ತು ಅತ್ಯವಶ್ಯಕ ಸರಕುಗಳ ಸಾಗಣೆಗೆ ಬಳಸಲಾಗುತ್ತದೆ. ಈ ಜೆಟ್ಟಿಯ 200 ಮೀಟರ್ ಭಾಗವನ್ನು PPP ಮಾದರಿಯಲ್ಲಿ ROMT ಆಧಾರದ ಮೇಲೆ ಅಭಿವೃದ್ಧಿ ಮಾಡಲು ಉದ್ದೇಶಿಸಿದ್ದು, ಉಳಿದ ಭಾಗವನ್ನು ಕರ್ನಾಟಕ ಜಲಸಾರಿಗೆ ಮಂಡಳಿಯು ನಿರ್ವಹಿಸುತ್ತದೆ. ಪ್ರಸ್ತುತ, ಹಳೆಯ ಮಂಗಳೂರು ಬಂದರು (ಬೇಂಗ್ರೆ ಭಾಗ) ಮತ್ತು ಮಲ್ಪೆ ಬಂದರಿನಿಂದ ಕರ್ನಾಟಕ ಜಲಸಾರಿಗೆ ಮಂಡಳಿಗೆ ಯಾವುದೇ ಆದಾಯ ಸಿಗುತ್ತಿಲ್ಲ. ಈ ಯೋಜನೆಯಿಂದ ರಾಜ್ಯ ಖಜಾನೆಗೆ ಹೆಚ್ಚುವರಿ ಆರ್ಥಿಕ ಆದಾಯ ದೊರೆಯುವ ಅವಕಾಶ ಕಲ್ಪಿಸಿದಂತಾಗುತ್ತದೆ.

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ ಇವರು, ಪಿಪಿಪಿ ಪಾಲಿಸಿ-2025 ರಡಿಯಲ್ಲಿ ರಾಜ್ಯದ ಕರಾವಳಿಯ ನಾಲ್ಕು ಹಾಲಿ (existing) ಬಂದರುಗಳಾದ (i) ಕಾರವಾರ, (ii) ಹಳೇ ಮಂಗಳೂರು (ಬೇಂಗ್ರೆ ಬದಿ), (iii) ಹಳೇ ಮಂಗಳೂರು (ನಗರ ಬದಿಯ) ಮತ್ತು (iv) ಮಲ್ಪೆಯ ಬರ್ತ್‌ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ- ಕಾರ್ಯಾಚರಣೆ- ನಿರ್ವಹಣೆ-ವರ್ಗಾವಣೆ (ROMT) ಆಧಾರದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿ, ಪ್ರಸ್ತಾಪಿತ ನಾಲ್ಕು ಯೋಜನೆಗಳ ಕಾರ್ಯಾಧ್ಯಯನ ವರದಿಗಳು ಹಾಗೂ ಖಾಸಗಿ ಪಾಲುದಾರ/ ರಿಯಾಯಿತಿದಾರರ ಆಯ್ಕೆಗಾಗಿ ಕರಡು ಸಂಗ್ರಹಣಾ ದಾಖಲೆಗಳನ್ನು ಸಿದ್ಧಪಡಿಸಿ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು ಕರಾವಳಿಯ ಪ್ರಸ್ತಾವಿತ ಯೋಜನೆಗಳಾಗಿರುವ ರಾಜ್ಯದ ನಾಲ್ಕು ಹಾಲಿ (existing) ಬಂದರುಗಳಾದ (i) ಕಾರವಾರ, (ii) ಹಳೇ ಮಂಗಳೂರು (ಬೇಂಗ್ರೆ ಬದಿ), (iii) ಹಳೇ ಮಂಗಳೂರು (ನಗರ ಬದಿಯ) ಮತ್ತು (iv) ಮಲ್ಪೆಯ ಬರ್ತ್‌ಗಳನ್ನು ಪಿಪಿಪಿ ಮಾದರಿಯ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ- ವರ್ಗಾವಣೆ (ROMT) ಆಧಾರದ ಮೇಲೆ ಅಭಿವೃದ್ಧಿಪಡಿಸುವುದರಿಂದ, ಯೋಜನೆಗಳ ಮೂಲಸೌಕರ್ಯದ ಮೇಲಿನ ಸರ್ಕಾರದ ಬಂಡವಾಳ ಹೂಡಿಕೆಯ ವೆಚ್ಚದ ಮೇಲಿನ ಹೊರೆಯು ಕಡಿತಗೊಳ್ಳುವುದಲ್ಲದೇ, ರಿಯಾಯಿತಿ ಅವಧಿಯಲ್ಲಿ ರಾಜಸ್ವ ಮತ್ತು ಬಂದರು ಭೂಮಿಯ ಭೋಗ್ಯದ ಮೂಲಕ (ಕೆಳಗೆ ಲೆಕ್ಕಹಾಕಿರುವಂತೆ) ಕರ್ನಾಟಕ ಜಲಸಾರಿಗೆ ಮಂಡಳಿಯ ವಾರ್ಷಿಕ ಆದಾಯದಲ್ಲಿ ಹೆಚ್ಚಳದ ನಿರೀಕ್ಷಣೆಯನ್ನು ಹೊಂದಿರುತ್ತದೆ ಎಂದು ತಿಳಿಸಿರುತ್ತಾರೆ.

Project Name (Existing Port)	Karwar	Old Mangalore (Bengre side)	Old Mangalore (City side)	Malpe
Concession Period (Years)	15	30	30	30
Total Project Cost (₹. Cr)	20.70	8.87	6.12	4.43
Minimum Assured Annual Revenue to KMB from Royalty Payment (in ₹ Cr.)	10	3.42	1.05	0.75
Annual Lease Rental for the entire backup area (in ₹ Cr.)	0.13	1.42	1.05	0.24** [**- lease amount calculated is based on total of berth and backup areas)

ರಾಜ್ಯದ ನಾಲ್ಕು ಹಾಲಿ (existing) ಬಂದರುಗಳಾದ (i) ಕಾರವಾರ (ii) ಹಳೇ ಮಂಗಳೂರು (ಬೇಂಗ್ರೆ ಬದಿ) (iii)ಹಳೇ ಮಂಗಳೂರು(ನಗರ ಬದಿ) ಮತ್ತು (iv) ಮಲ್ಪೆಯ ಬರ್ತ್‌ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ(ಪಿಪಿಪಿ) ಮಾದರಿಯಲ್ಲಿ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT) ಆಧಾರದಲ್ಲಿ ಅಭಿವೃದ್ಧಿಪಡಿಸಿ ನಿರ್ವಹಿಸುವ ಗುರಿಯನ್ನು ಹೊಂದಿದ್ದು, ಇದು ಖಾಸಗಿ ಪಾಲುದಾರಿಕೆ ಯೊಡನೆ ಕರಾವಳಿಯ ಆಯ್ದ ಹಾಲಿ ಬಂದರುಳ ಕಾರ್ಯಕ್ಷಮತೆ ಮತ್ತು ದಕ್ಷತೆಯನ್ನು ಗಮನಾರ್ಹವಾಗಿ ಹೆಚ್ಚಿಸುವುದರೊಂದಿಗೆ ಕರ್ನಾಟಕ ಜಲಸಾರಿಗೆ ಮಂಡಳಿಯ ವಾರ್ಷಿಕ ಆದಾಯದ ಹೆಚ್ಚಳ, ಸ್ಥಳೀಯ ಉದ್ಯೋಗದ ಹೆಚ್ಚಳ ಮತ್ತು ಸುಧಾರಿತ

ಜೀವನೋಪಾಯಕ್ಕೆ ಅವಕಾಶ ನೀಡುವ ಮೂಲಕ ಈ ಯೋಜನೆಗಳು ಅಭಿವೃದ್ಧಿಯನ್ನು ಉತ್ತೇಜಿಸುತ್ತವೆ ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ ಇವರು ತಿಳಿಸುತ್ತಾ, ಸದರಿ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: IDD/43/PSP/2025, PI, ಬೆಂಗಳೂರು ದಿನಾಂಕ:10.11.2025

ರಾಜ್ಯದ ಕರಾವಳಿಯಲ್ಲಿರುವ ನಾಲ್ಕು ಹಾಲಿ ಬಂದರುಗಳಾದ (i) ಕಾರವಾರ (ii) ಹಳೇ ಮಂಗಳೂರು (ಬೇಂಗ್ರೆ ಬದಿ) (iii) ಹಳೇ ಮಂಗಳೂರು (ನಗರ ಬದಿ) ಮತ್ತು (iv) ಮಲ್ಪೆಯ ಬರ್ತ್‌ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ-ಕಾರ್ಯಾಚರಣೆ- ನಿರ್ವಹಣೆ- ವರ್ಗಾವಣೆ (ROMT) ಆಧಾರದ ಮೇಲೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಒಟ್ಟು ರೂ.40.12 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ವಹಿಸಲು ಖಾಸಗಿ ಪಾಲುದಾರರಿಗೆ ವಹಿಸಲು ಈ ಕೆಳಗಿನಂತೆ ಸರ್ಕಾರದ ಅನುಮೋದನೆ ನೀಡಿದೆ.

1. ಕಾರವಾರ ಬಂದರಿನಲ್ಲಿ ಅಂದಾಜು ರೂ.20.70 ಕೋಟಿ ಯೋಜನಾ ವೆಚ್ಚದಲ್ಲಿ 175 ಮೀ. ಬರ್ತ್‌ಗೆ-2100 ಚ.ಮೀ., Transit shed ಗೆ-3120 ಚ.ಮೀ, Back up landಗೆ-4026 ಚ.ಮೀ. ಹಾಗೂ 30 ಅಡಿ ರಸ್ತೆಗೆ 2544 ಚ.ಮೀ, ಸೇರಿ ಅಂದಾಜು ಒಟ್ಟು 11790 ಚ.ಮೀ ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT) ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ ನೀಡಿದೆ.

2. ಹಳೆ ಮಂಗಳೂರು ಬಂದರು (ನಗರ ಬದಿ) ಯಲ್ಲಿ ಅಂದಾಜು ರೂ.6.12 ಕೋಟಿ ಯೋಜನಾ ವೆಚ್ಚದಲ್ಲಿ 200 ಮೀ. ಬರ್ತ್ ಗೆ-3200 ಚ.ಮೀ, ware house ಗೆ- 1554.5 ಚ.ಮೀ, Back up land ಗೆ 7737 ಚ.ಮೀ ಹಾಗೂ 30 ಅಡಿ ರಸ್ತೆಗೆ 2458.5 ಚ.ಮೀ ಸೇರಿ ಅಂದಾಜು ಒಟ್ಟು 14,950 ಚ.ಮೀ ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT) ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ ನೀಡಿದೆ.

3. ಹಳೆ ಮಂಗಳೂರು ಬಂದರು (ಬೇಂಗ್ರೆ ಬದಿ) ಯಲ್ಲಿ ಅಂದಾಜು ರೂ.8.87 ಕೋಟಿ ಯೋಜನಾ ವೆಚ್ಚದಲ್ಲಿ 350 ಮೀ. ಬರ್ತ್‌ಗೆ - 4200 ಚ.ಮೀ., warehouse ಗೆ-440.9 ಚ.ಮೀ, Back up land ಗೆ 17500 ಚ.ಮೀ ಹಾಗೂ ರಸ್ತೆಗೆ 1832.1 ಚ.ಮೀ ಸೇರಿ ಅಂದಾಜು ಒಟ್ಟು 23,973 ಚ.ಮೀ ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT) ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ ನೀಡಿದೆ.

4. ಮಲ್ಪೆ ಬಂದರಿನಲ್ಲಿ ಅಂದಾಜು ರೂ.4.43 ಕೋಟಿ ಯೋಜನಾ ವೆಚ್ಚದಲ್ಲಿ 83 ಮೀ. ವಾಣಿಜ್ಯ ಬರ್ತ್ ಹಾಗೂ Back up land ಸೇರಿ ಒಟ್ಟು 8770 ಚ.ಮೀ.ಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ರಿಪೇರಿ-ಕಾರ್ಯಾಚರಣೆ-ನಿರ್ವಹಣೆ-ವರ್ಗಾವಣೆ (ROMT) ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ ನೀಡಿದೆ.

ಷರತ್ತುಗಳು:

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಗಳನ್ನು (KTPP ACT) ಕಡ್ಡಾಯವಾಗಿ ಪಾಲಿಸುವುದು.
2. PPP policy for Infrastructure Projects -2025 ಮತ್ತು PPP Guidelines ಅನುಸರಿಸುವುದು.
3. ಅಗತ್ಯವಿರುವ ಎಲ್ಲಾ ಶಾಸನಬದ್ಧ ಅನುಮತಿಗಳನ್ನು ಸಂಬಂಧಿಸಿದ ಭಾಗಿದಾರರು ಪಡೆದುಕೊಳ್ಳತಕ್ಕದ್ದು.

ಈ ಆದೇಶವನ್ನು ದಿನಾಂಕ:30.10.2025 ರಂದು ನಡೆದ ಸಚಿವ ಸಂಪುಟದ ಸಭೆಯ ಪ್ರಕರಣ ಸಂಖ್ಯೆ:ಸಿ.873/2025 ರ ನಿರ್ಣಯದ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರತ್ನಮ್ಮ ಜಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ. (ಬಂದರು)

PR-254

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹೆಚ್ಚುವರಿ ಕಬ್ಬು ಬೆಲೆ ನಿಗದಿಪಡಿಸುವ ಬಗ್ಗೆ

ಓದಲಾಗಿದೆ:

1. ಕೇಂದ್ರ ಸರ್ಕಾರದ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಪತ್ರ ಸಂಖ್ಯೆ: 3(1)/2024-ಎಸ್‌ಪಿ-I, ದಿನಾಂಕ:06.05.2025
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್‌ಟಿಟಿ/01/202-26, ದಿನಾಂಕ:15.09.2025
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಎಸ್‌ಕೆ/32/2019-20, ದಿನಾಂಕ:27.06.2025 ಮತ್ತು 26.08.2025
4. ರಾಜ್ಯಾಧ್ಯಕ್ಷರು, ರಾಷ್ಟ್ರೀಯ ರೈತರ ಸಂಘ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಬೆಳಗಾವಿ ಇವರ ಮನವಿ
5. ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ವಿಶೇಷ ಕಾರ್ಯದರ್ಶಿಯವರ ದಿನಾಂಕ:06.11.2025ರ ಸಭಾ ಸೂಚನಾ ಪತ್ರಗಳು.

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ, 2025-26ನೇ ಸಕ್ಕರೆ ಹಂಗಾಮಿನಲ್ಲಿ ದೇಶದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ (Fair and Remunerative Price) ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರದ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ನಿಗದಿಗೊಳಿಸಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.3550.00
2. ಶೇಕಡ 10.25ಕ್ಕೆ ಮೇಲ್ಪಟ್ಟ ಇಳುವರಿಗೆ ತದನಂತರದ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.3.46 ರಂತೆ ಹೆಚ್ಚುವರಿ ಬೆಲೆ..

3. ಶೇಕಡ 10.25ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕಿಂತ ಮೇಲ್ಪಟ್ಟ ಇಳುವರಿಯನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.3.46ರಷ್ಟು ಪ್ರಮಾಣದಲ್ಲಿ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.
4. ಶೇಕಡ 9.5 ರಷ್ಟು ಅಥವಾ 9.50 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ.ಟನ್‌ಗೆ ರೂ.3290.05 ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ ನಿಗದಿಪಡಿಸುವುದು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ, 2024-25ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಪಡೆದ ಸಕ್ಕರೆ ಇಳುವರಿಯನ್ನು ಆಧರಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ನಿಗದಿಪಡಿಸಿದ ಮಾರ್ಗಸೂಚಿಗಳನ್ವಯ ರಾಜ್ಯದ ಸಕ್ಕರೆ ಕಾರ್ಖಾನೆಗಳು 2025-26ನೇ ಹಂಗಾಮಿನಲ್ಲಿ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ನಿಗದಿಪಡಿಸಿ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರಗಳಲ್ಲಿ, ದಿನಾಂಕ:10.06.2025ರಂದು ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ನಿರ್ಣಯಿಸಿದಂತೆ 2025-26ನೇ ಹಂಗಾಮಿನಲ್ಲಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಅನುಸರಿಸಬೇಕಾದ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಮನವಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಮಾರ್ಗಸೂಚಿಗಳು ನ್ಯಾಯಯುತವಾಗಿ ಇಲ್ಲದೇ ಇರುವ ಕಾರಣ ರೈತರು ಬೆಳೆದ ಕಬ್ಬಿಗೆ ಸರಿಯಾದ ಬೆಲೆ ಸಿಗುತ್ತಿಲ್ಲವೆಂದು ಮತ್ತು ಉತ್ಪಾದನೆಗೆ ಆಗುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದೇ ಇಳುವರಿ (Recovery) ಆಧಾರದ ಮೇಲೆ ಬೆಲೆ ನಿರ್ಧಾರವಾಗುತ್ತಿರುವುದರಿಂದ ಇಳುವರಿ ವರದಿಯು ಕೂಡ ಪಾರದರ್ಶಕವಾಗಿರುವುದಿಲ್ಲವೆಂದು ರೈತರಿಗೆ ಕಬ್ಬಿನ ದರದಲ್ಲಿ ವ್ಯತ್ಯಾಸವಾಗುತ್ತಿದ್ದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಸಮಸ್ಯೆಯನ್ನು ಪರಿಹರಿಸುವಂತೆ ಹಾಗೂ ಪ್ರಸ್ತುತ ವರ್ಷ ರೂ.3500.00 ಗಳ ಬೆಂಬಲ ಬೆಲೆಯನ್ನು ನೀಡುವಂತೆ ವಿನಂತಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಸಭಾ ಸೂಚನಾ ಪತ್ರಗಳಲ್ಲಿ ನಿಗದಿಪಡಿಸಿರುವಂತೆ ದಿನಾಂಕ: 07.11.2025ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲೀಕರು / ಪ್ರತಿನಿಧಿಗಳೊಂದಿಗೆ ಮತ್ತು ರಾಜ್ಯದ ಕಬ್ಬು ಬೆಳೆಗಾರರು ಹಾಗೂ ರೈತ ಸಂಘಟನೆಗಳ ಮುಖಂಡರು ಮತ್ತು ಪ್ರತಿನಿಧಿಗಳೊಂದಿಗೆ ಸುಧೀರ್ಘವಾಗಿ ಸಭೆಯನ್ನು ಜರುಗಿಸಲಾಗಿರುತ್ತದೆ. ಸದರಿ ಸಭೆಯಲ್ಲಿ, ರಾಜ್ಯದ ಉತ್ತರ ಭಾಗದ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿರುವುದರಿಂದ ರೈತರು ತಮ್ಮ ಕಬ್ಬಿಗೆ ಹೆಚ್ಚಿನ ಬೆಲೆಯನ್ನು ನಿಗದಿಪಡಿಸುವಂತೆ ಒತ್ತಾಯಿಸಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್‌ನಲ್ಲಿ ನಡೆಸುತ್ತಿರುವ ಪ್ರತಿಭಟನೆಯ ಕುರಿತು ಹಾಗೂ ಬೆಳಗಾವಿ ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮತ್ತು ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರು ನಡೆಸಿರುವ ಸಭೆಗಳ ಕುರಿತು ಹಾಗೂ ಪ್ರತಿಭಟನಾ ಸ್ಥಳದಲ್ಲಿ ರೈತ ಪ್ರತಿನಿಧಿಗಳೊಂದಿಗೆ ನಡೆಸಿದ ಸಂಧಾನ ಸಭೆಗಳ ಕುರಿತು ಚರ್ಚಿಸಲಾಯಿತು. ರೈತರ ಪ್ರತಿಭಟನೆಗಳು ಬಾಗಲಕೋಟೆ, ವಿಜಯಪುರ ಕಲಬುರಗಿ, ಹಾವೇರಿ ಮತ್ತು ಇತರೆ ಜಿಲ್ಲೆಗಳಲ್ಲಿಯೂ ತೀವ್ರ ಸ್ವರೂಪ ಪಡೆದುಕೊಂಡಿರುವ ಕುರಿತು ಜಿಲ್ಲಾಧಿಕಾರಿಗಳು ವಿಡೀಯೋ ಕಾನ್ಫರೆನ್ಸ್ ಮೂಲಕ ಸಭೆಯ ಗಮನಕ್ಕೆ ತಂದಿರುತ್ತಾರೆ.

ಕೇಂದ್ರ ಸರ್ಕಾರವು ರೈತರ ಕಬ್ಬಿಗೆ ನಿಗದಿಪಡಿಸಿರುವ ಎಫ್. ಆರ್.ಪಿ. ಯು ರೈತರಿಗೆ ಒಪ್ಪಿಗೆಯಾಗದೇ ಇರುವುದರಿಂದ ಮತ್ತು ಅನೇಕ ಕಾರ್ಖಾನೆಗಳು ರೈತರೊಂದಿಗೆ ಸಹಕಾರ ಮನೋಭಾವದೊಂದಿಗೆ ವ್ಯವಹರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ನಿಗದಿಪಡಿಸಿರುವ

ಎಫ್.ಆರ್.ಪಿ ಗಿಂತ ಹೆಚ್ಚಿನ ದರವನ್ನು ಹಿಂದಿನ ವರ್ಷಗಳಲ್ಲಿ ನೀಡಿರುವುದನ್ನು ಪರಿಗಣಿಸಿ, ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ 2025-26ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ಇಳುವರಿ ಆಧಾರದ ಮೇಲೆ ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ನೀಡಲು ಸಭೆಯು ತೀರ್ಮಾನಿಸಿರುತ್ತದೆ. ಅದರಂತೆ ಸರ್ಕಾರದ ಈ ಕೆಳಕಂಡಂತೆ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025,</u>
<u>ಬೆಂಗಳೂರು, ದಿನಾಂಕ: 08 ನೇ ನವೆಂಬರ್, 2025</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗದಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿಯ ಕ್ರಮವಾಗಿ ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

ಮಾನ್ಯ ಮುಖ್ಯಮಂತ್ರಿಗಳು ಸಕ್ಕರೆ ಕಾರ್ಖಾನೆಗಳು ಮತ್ತು ರೈತ ಮುಖಂಡರೊಂದಿಗೆ ನಡೆಸಿದ ಸಭೆಯಲ್ಲಿ ನಿರ್ಣಯಿಸಿದಂತೆ ನಿರ್ಧರಿಸಿದ ಕಬ್ಬು ದರಗಳು ಇಂತಿವೆ;

ಇಳುವರಿ	ಎಫ್.ಆರ್.ಪಿ (ಪ್ರತಿ ಮೆ.ಟನ್‌ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಒಳಗೊಂಡಂತೆ (ರೂ.ಗಳಲ್ಲಿ)	ಸಕ್ಕರೆ ಕಾರ್ಖಾನೆಗಳು ಮೊದಲಿನ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ)	ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ)			ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ)
			ಸಕ್ಕರೆ ಕಾರ್ಖಾನೆಗಳು	ರಾಜ್ಯ ಸರ್ಕಾರ	ಒಟ್ಟು	
1	2	3	4	5	6	**7 (3 +6)**
9.5 % ಅಥವಾ ಕಡಿಮೆ	3290.50	ಕಾರ್ಖಾನೆಗಳು ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ	50	50	100	ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ
10.25%	3550.00	3100.00	50	50	100	3200.00
11.25%	3896.00	3200.00	50	50	100	3300.00

** 10.25 – 9.5 % ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

** 11.25 – 10.25 % ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್ ಪರಿಗಣಿಸುವುದು.

ಕಾರ್ಖಾನೆಗಳು ಪ್ರಥಮ ಕಂತಿನ ಮೊತ್ತವನ್ನು ಸಕ್ಕರೆ ನಿಯಂತ್ರಣ ಕಾಯ್ದೆಯಡಿಯಲ್ಲಿ ನಿಗದಿಪಡಿಸಿರುವಂತೆ 14 ದಿನಗಳಲ್ಲಿ ಹಣವನ್ನು ರೈತರಿಗೆ ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-255

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಜಿ.ಆರ್.ಲ್ಯಾವೆಂಡರ್ ಅಪಾರ್ಟ್ ಮೆಂಟ್ ಓನರ್ಸ್ ಅಸೋಸಿಯೇಷನ್, ಜೆ.ಪಿ.ನಗರ, ಬೆಂಗಳೂರು ದಕ್ಷಿಣ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1. **ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಜಂನಿ/(ಐಸಿಡಿಪಿ)/ಸಂಸಂ-02/187/2023-24, ದಿನಾಂಕ: 19.03.2024.**
2. **ಸರ್ಕಾರದ ನೋಟೀಸ್ ಸಂ:ಸಿಒ 46 ಸಿ.ಎಸ್.ಆರ್ 2024, ದಿನಾಂಕ: 16.04.2024.**
3. **ಕಾರ್ಯದರ್ಶಿ ಮತ್ತು ಅಧ್ಯಕ್ಷರು, ಜಿ.ಆರ್.ಲ್ಯಾವೆಂಡರ್ ಅಪಾರ್ಟ್ ಮೆಂಟ್ ಓನರ್ಸ್ ಅಸೋಸಿಯೇಷನ್, ಜೆ.ಪಿ.ನಗರ, ಬೆಂಗಳೂರು ಇವರ ಲಿಖಿತ ಹೇಳಿಕೆ ದಿನಾಂಕ:04.05.2024 ಮತ್ತ 26.06.2024.**
4. **ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ ಇವರ ಪತ್ರ ಸಂಖ್ಯೆ:ಡಿಆರ್‌ಬಿ-3/ಸಂ.ಸಂ./ದೂ.ಅ/05/2023-24, ದಿನಾಂಕ:03.09.2024.**

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಜಿ.ಆರ್.ಲ್ಯಾವೆಂಡರ್ ಅಪಾರ್ಟ್ ಮೆಂಟ್ ಓನರ್ಸ್ ಅಸೋಸಿಯೇಷನ್, ಜೆ.ಪಿ.ನಗರ, ಬೆಂಗಳೂರು ದಕ್ಷಿಣ ಈ ಸಂಘದ ವಿರುದ್ಧದ ದೂರಿನಂತೆ ನಡೆಸಿದ್ದ ವಿಚಾರಣಾ ವರದಿಯಲ್ಲಿ ಸಂಘದ ಲೆಕ್ಕಪತ್ರಗಳನ್ನು ಕ್ರಮವಾಗಿ ನಿರ್ವಹಿಸಿರುವುದಿಲ್ಲವೆಂದು ಹಾಗೂ ಕಾರ್ಯಕಾರಿ ಸಮಿತಿಯವರು ಸಂಘಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆಂದು ವರದಿಸಿದ್ದು ಹಾಗೂ ಸಂಘದ ಪ್ರಸ್ತುತ ಆಡಳಿತ ಮಂಡಳಿಯು ಸಕಾಲದಲ್ಲಿ ಚುನಾವಣೆ ಜರುಗಿಸದೆ ಅಧಿಕಾರದಲ್ಲಿ ಮುಂದುವರೆದಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27ಎ ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3)ರ ಲಿಖಿತ ಹೇಳಿಕೆಯಲ್ಲಿ ದೂರುದಾರರು ಈ ಹಿಂದೆ ಸಂಘದ ಅಧ್ಯಕ್ಷರಾಗಿದ್ದು ವಾರ್ಷಿಕ ಮಹಾಸಭೆಯಲ್ಲಿ ಬಹುಮತವಿಲ್ಲದ ಕಾರಣ ಸದರಿ ಹುದ್ದೆಯಿಂದ ಕೆಳಗಿಳಿದಿದ್ದರಿಂದ ಪ್ರತೀಕಾರ ತೋರುತ್ತಿದ್ದು, ಸಂಘದ ಆಡಳಿತ ಮಂಡಳಿಯ ಎಲ್ಲಾ ಕ್ರಮಗಳು ಸಾಮಾನ್ಯ ಸಭೆಯ ಅನುಮೋದನೆಯಂತೆಯೇ ನಿರ್ವಹಿಸುತ್ತಿದ್ದು, ಸಂಘದಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು ಸಂಸ್ಥೆಯಿದ್ದು

ಅದು ಸಂಘದ ಎಲ್ಲಾ ಖರ್ಚು-ವೆಚ್ಚಗಳನ್ನು ಮತ್ತು ದಾಖಲೆಗಳನ್ನು ನಿರ್ವಹಿಸುತ್ತಿದ್ದು, ಅಲ್ಲದೇ ಸಾಮಾನ್ಯ ಸಭೆಯು ನೇಮಿಸಿರುವ ಬಾಹ್ಯ ಲೆಕ್ಕಪರಿಶೋಧಕರು ಸಂಘದ ವಾರ್ಷಿಕ ಖರ್ಚು-ವೆಚ್ಚಗಳ ಲೆಕ್ಕಪರಿಶೋಧನೆ ಮಾಡಿ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸುತ್ತಾರೆಂದು, ಸದರಿ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಗುತ್ತಿದ್ದು, ನಂತರ ಪ್ರತಿ ವರ್ಷ ಸಂಘದ ಲೆಕ್ಕಪರಿಶೋಧನಾ ವರದಿಯನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಲಾಗಿದೆಯೆಂದು, ಸಂಘದ ಆಡಳಿತ ಮಂಡಳಿಯ ಅವಧಿಯು 1 ವರ್ಷಗಳಿದ್ದು, ಸಂಘವು ಆರಂಭದಿಂದ ಆಡಳಿತ ಮಂಡಳಿಯನ್ನು ಪ್ರತಿ ವರ್ಷ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವಿರೋಧವಾಗಿ ಧ್ವನಿ ಮತದ ಮುಖಾಂತರ ಆಯ್ಕೆ ಮಾಡಿದ್ದು, ಪ್ರತಿ ವರ್ಷ ಸಂಘದ ಲೆಕ್ಕಪರಿಶೋಧನಾ ವರದಿಯೊಂದಿಗೆ ಚುನಾಯಿತ ಆಡಳಿತ ಮಂಡಳಿಯ ಪಟ್ಟಿಯನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ ಮತ್ತು ಸಂಘದ 2023-24ನೇ ಸಾಲಿಗೆ ಚುನಾವಣೆ ನಡೆದಿರುವುದಾಗಿ ತಿಳಿಸಿ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (4)ರ ವರದಿಯಲ್ಲಿ, ಸಂಘದ ಸದಸ್ಯರಲ್ಲದವರನ್ನು ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯಾಗಿ ಮುಂದುವರೆಸಿದ್ದು, ಸದಸ್ಯರಲ್ಲದವರಿಗೆ ಕೋ-ಓನರ್ ಎಂದು ಅಧಿಕೃತ ಪತ್ರ ನೀಡುವ ಮೂಲಕ ಕಾನೂನು ಬಾಹಿರ ವ್ಯವಹಾರ ನಡೆಸಿ ಬೈಲಾ ಸಂಖ್ಯೆ: 37(1ಎ) ಉಲ್ಲಂಘನೆಯಾಗಿದ್ದು, 2021-22 ನೇ ಸಾಲಿನ ಬಜೆಟ್‌ನಲ್ಲಿ ಅನಗತ್ಯವಾಗಿ ಹಣ ಖರ್ಚುಮಾಡಿರುವುದು, ಬೈಲಾ ಸಂಖ್ಯೆ:28 ರ ಉಲ್ಲಂಘಿಸಿ ನಿರ್ವಹಣಾ ವೆಚ್ಚಗಳನ್ನು ಸಂಗ್ರಹಿಸಿರುವುದು 2020-21, 2021-22 ರ ಲೆಕ್ಕ ಪರಿಶೋಧನೆಯಂತೆ ಸಾಬೀತಾಗಿರುವುದು, ಸಂಘದ ದಿನಸಿ ಅಂಗಡಿ ಬಾಡಿಗೆಗೆ ಸಂಬಂಧಿಸಿದಂತೆ ಗುತ್ತಿಗೆ ಅವಧಿ ಮುಗಿದಿದ್ದರೂ ಅನಧಿಕೃತವಾಗಿ ಮುಂದುವರೆಸಿದ್ದು, ಆಡಳಿತ ಮಂಡಳಿ ಅವಧಿಯಲ್ಲಿ ಹೊಸ ಬಾಡಿಗೆ ವೆಂಡರ್‌ಗೆ ಏರ್ಪಾಡು ಮಾಡಿ ಗುತ್ತಿಗೆ ನೀಡಿದ್ದು, ಬಾಡಿಗೆ ಮೊತ್ತವನ್ನು ಮೂರು ಪಟ್ಟು ಹೆಚ್ಚು ನಿಗದಿಪಡಿಸಿ ಹಿಂದಿನ ಬಾಡಿಗೆ ದರ ಕಡಿಮೆ ನೀಡಿ ಸಂಘಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು. 2021-22 ವಾರ್ಷಿಕ ಮಹಾ ಸಭೆಯಲ್ಲಿ ಸಭೆಗೆ ಭಾಗವಹಿಸುವ ಪ್ರಾಕ್ಸಿ(Proxy) ಸದಸ್ಯರ ವಯಸ್ಸು 21 ವರ್ಷಕ್ಕೆ ನಿಗಧಿಪಡಿಸಿದ್ದು ಈ ಸಭೆಯಲ್ಲಿ ಭಾಗವಹಿಸುವ ಸದಸ್ಯರ ವಯಸ್ಸು 18 ಆಗಿದ್ದು ಇವರಿಗೆ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅವಕಾಶ ನಿಗದಿಪಡಿಸಿರುತ್ತಾರೆ. ಇದು ಕಾನೂನು ಬಾಹಿರವಾಗಿ ಮಾಡಿಕೊಂಡ ನಿರ್ಣಯವಾಗಿರುತ್ತದೆ, ಸಿಂಕಿಂಗ್ ಫಂಡ್ ಅನ್ನು ಬೈಲಾ ವಿರುದ್ಧವಾಗಿ ಬಳಸಿರುವುದು ಕಾನೂನು ಬಾಹಿರ ಅವ್ಯವಹಾರವಾಗಿದ್ದು, ಸದರಿ ಹಣವನ್ನು ನಿವಾಸಿಗಳ ಕ್ಷೇಮಾಭಿವೃದ್ಧಿಗೆ ಬಳಸದೆ ಠೇವಣಿ ರೂಪದಲ್ಲಿ ತೊಡಗಿಸಿ ಆದಾಯ ಗಳಿಕೆಗೆ ಅವಕಾಶಮಾಡಿಕೊಂಡು ಸಂಘಗಳ ನೊಂದಣಿ ಕಾಯ್ದೆಗೆ ವಿರುದ್ಧವಾಗಿದ್ದು, ಸಂಘದ ಪದಾಧಿಕಾರಿಗಳು ಬೈಲಾ ಸಂಖ್ಯೆ 29(1) ರಂತೆ ಅವಕಾಶವನ್ನು ಉಲ್ಲಂಘಿಸಿ ನಗದು ವ್ಯವಹಾರ ಮಾಡಿ ಬೈಲಾ ಉಲ್ಲಂಘಿಸಿರುವುದು ಸೇರಿದಂತೆ, ಇನ್ನೂ ಹಲವಾರು ಆಡಳಿತಾತ್ಮಕ ನ್ಯೂನತೆಗಳನ್ನು ಎಸಗಿರುವುದು ಹಾಗೂ ಸಂಘಕ್ಕೆ ಸಂಗ್ರಹಣೆಯಾದ ಸಂಪನ್ಮೂಲವನ್ನು ಅನವಶ್ಯಕತೆಯಾಗಿ ಬಳಸಿ ಸಮರ್ಪಕ ದಾಖಲೆ ಒದಗಿಸುವಲ್ಲಿ ವಿಫಲಾಗಿರುವ ಹಿನ್ನೆಲೆಯಲ್ಲಿ ಸಂಘದಲ್ಲಿ ನಡೆದಿರುವ ನ್ಯೂನತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಉಪ ನಿಬಂಧಕರು ಅಭಿಪ್ರಾಯಪಟ್ಟಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ, ಸಂಘದ ಲಿಖಿತ ಹೇಳಿಕೆ ಮತ್ತು ಸಹಕಾರ ಸಂಘಗಳ ಉಪ ನಿಬಂಧಕರ ಪರಿಶೀಲಿಸಲಾಗಿ, ಸಂಘದ ಸದಸ್ಯರಲ್ಲದವರನ್ನು ಪದಾಧಿಕಾರಿಗಳಾಗಿ ಮುಂದುವರೆಸಿ ಬೈಲಾ ಉಲ್ಲಂಘನೆ ಮಾಡಿರುವುದು, ಸಂಘದ ಬೈಲಾ ಉಲ್ಲಂಘಿಸಿ ಸದಸ್ಯರಿಂದ ಹಣ ಸಂಗ್ರಹಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಸಾಬೀತಾಗಿರುವುದು, ಸಂಘದ ಬೈಲಾ ವಿರುದ್ಧವಾಗಿ ಸಿಂಕಿಂಗ್ ಫಂಡ್‌ನ್ನು ಬಳಸಿರುವುದು ಹಾಗೂ ಸಂಘದ ಬೈಲಾದ ಅವಕಾಶಗಳನ್ನು ಉಲ್ಲಂಘಿಸಿ ಪದಾಧಿಕಾರಿಗಳು ನಗದು ವ್ಯವಹಾರ ಮಾಡಿರುವುದು, ಹೀಗೆ ಸಂಘದ ವಿರುದ್ಧದ ಆರೋಪಗಳಲ್ಲಿ 09 ಆರೋಪಗಳು ಸಾಬೀತಾಗಿದ್ದು, ಕಾರ್ಯಕಾರಿ ಸಮಿತಿಯವರು ನಿರ್ಲಕ್ಷತೆ ವಹಿಸಿ ಸಂಘಕ್ಕೆ ಸಂಗ್ರಹಣೆಯಾದ ಸಂಪನ್ಮೂಲವನ್ನು ಅನವಶ್ಯಕತೆಯಾಗಿ ಬಳಸಲಾಗಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಯ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 46 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 06.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಜಿ.ಆರ್.ಲ್ಯಾವೆಂಡರ್ ಅಪಾರ್ಟ್ ಮೆಂಟ್ ಓನರ್ಸ್ ಅಸೋಸಿಯೇಷನ್, ಜೆ.ಪಿ.ನಗರ, ಬೆಂಗಳೂರು ದಕ್ಷಿಣ ಈ ಸಂಘಕ್ಕೆ ಶ್ರೀ ಹರೀಶ್‌ಕುಮಾರ್ ಬಿ.ವಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-256

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಎಂ.ಎಸ್.ಪಿ.ಸಿ., ಅವರಗೊಳ್ಳ, ದಾವಣಗೆರೆ ತಾಲ್ಲೂಕು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ..

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ: ಸಿಒ 68 ಸಿಎಸ್‌ಆರ್ 2023 ಬೆಂಗಳೂರು, ದಿನಾಂಕ: 10.11.2023 ಮತ್ತು 27.09.2024.
2. ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಇವರ ಪತ್ರ ಸಂಖ್ಯೆ.ಡಿಆರ್ /ಡಿವಿಜಿ/ಎಂ.ಎಸ್.ಪಿ.ಸಿ/ಸಿಆರ್-/2024-25/516, ದಿನಾಂಕ:16.09.20245.

*****

ಪ್ರಸ್ತಾವನೆ:

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಎಂ..ಎಸ್.ಪಿ.ಸಿ., ಅವರಗೊಳ್ಳ, ದಾವಣಗೆರೆ ತಾಲ್ಲೂಕು ಈ ಸಂಘಕ್ಕೆ ಆಡಳಿತಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪ-ವಿಭಾಗ, ದಾವಣಗೆರೆ ಜಿಲ್ಲೆ ಇವರನ್ನು ನೇಮಿಸಿ ಆದೇಶಿಸಲಾಗಿತ್ತು. ನಂತರ ಸದರಿಯವರನ್ನು ಬದಲಾಯಿಸಿ, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ನೇಮಿಸಿ, ಆಡಳಿತಾಧಿಕಾರಿಯ ಅವಧಿಯನ್ನು 06 ತಿಂಗಳಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರಗಳಲ್ಲಿ ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ:10.11.2024ಕ್ಕೆ ಮುಕ್ತಾಯಗೊಂಡಿದ್ದು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ ಇವರ ಕೋರಿಕೆಯಂತೆ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಅದರಂತೆ ಸಹಕಾರ ಸಂಘಗಳ ಉಪ ನಿಬಂಧಕರ ಪ್ರಸ್ತಾವನೆ ಪರಿಶೀಲಿಸಲಾಗಿ, ಎಂ.ಎಸ್.ಪಿ.ಸಿ., ಅವರಗೊಳ್ಳ, ದಾವಣಗೆರೆ ತಾಲ್ಲೂಕು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ ಇವರನ್ನು ಮುಂದುವರೆಸಲು ಹಾಗೂ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:10.11.2024 ರಿಂದ 09.05.2025 ರವರೆಗೆ ಮತ್ತು ದಿನಾಂಕ:10.05.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 68 ಸಿಎಸ್‌ಆರ್ 2023

ಬೆಂಗಳೂರು, ದಿನಾಂಕ: 06.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಎಂ.ಎಸ್.ಪಿ.ಸಿ, ಅವರಗೊಳ್ಳ, ದಾವಣಗೆರೆ ತಾಲ್ಲೂಕು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ ಇವರನ್ನು ಮುಂದುವರೆಸಿ, ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:10.11.2024 ರಿಂದ 09.05.2025 ರವರೆಗೆ ಮತ್ತು ದಿನಾಂಕ:10.05.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-257

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಅಖಿಲ ಕರ್ನಾಟಕ ಕೊರಮರ ಸಂಘ, ಬೆಂಗಳೂರು ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸುವ ಬಗ್ಗೆ.

ಓದಲಾಗಿದೆ :- 1. ಸರ್ಕಾರದ ಆದೇಶ ಸಂ. ಸಿಒ 71 ಸಿಎಸ್‌ಆರ್ 2023, ದಿನಾಂಕ: 24.01.2024.
2. ಸರ್ಕಾರದ ಆದೇಶ ಸಂ. ಸಿಒ 71 ಸಿಎಸ್‌ಆರ್ 2023, ದಿನಾಂಕ: 04.09.2025.
3. ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ ಇವರ ಪತ್ರ ಸಂಖ್ಯೆ; ಡಿಆರ್‌ಬಿ-2/ಸಂ.ಸಂಸ್ಥೆ/ದೂರು/58/2022-23, ದಿನಾಂಕ: 22.09.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಅಖಿಲ ಕರ್ನಾಟಕ ಕೊರಮರ ಸಂಘ, ಮಾವಳ್ಳಿ ಟ್ಯಾಂಕ ಬಂಡ್ ರಸ್ತೆ, ಬೆಂಗಳೂರು, ಈ ಸಂಘಕ್ಕೆ ಶ್ರೀ. ಲಕ್ಷ್ಮಣ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಬೆಂಗಳೂರು ಪ್ರಾಂತ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಅಖಿಲ ಕರ್ನಾಟಕ ಕೊರಮರ ಸಂಘ, ಬೆಂಗಳೂರು, ಈ ಸಂಘದ ಆಡಳಿತಾಧಿಕಾರಿಯಾಗಿದ್ದ ಶ್ರೀ. ಲಕ್ಷ್ಮಣ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರನ್ನು ಬದಲಾಯಿಸಿ ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಅವಧಿಯನ್ನು ವಿಸ್ತರಿಸಲಾಗಿತ್ತು.

ಮೇಲೆ ಓದಲಾದ (3) ರ ಪತ್ರದಲ್ಲಿ, ಅಖಿಲ ಕರ್ನಾಟಕ ಕೊರಮರ ಸಂಘ ಬೆಂಗಳೂರು ಈ ಸಂಘಕ್ಕೆ ನೇಮಿಸಲಾಗಿರುವ ಆಡಳಿತಾಧಿಕಾರಿಗೆ ಕೆಲಸದೊತ್ತಡ ಮತ್ತು ಅನಾರೋಗ್ಯ ಕಾರಣಗಳಿಂದ ಸಂಘದ ಆಡಳಿತಾದಿಕಾರಿಯಾಗಿ ಕಾರ್ಯನಿರ್ವಹಿಸಲು ಕಷ್ಟ ಸಾಧ್ಯವಾಗಿರುವುದರಿಂದ ಸದರಿ ನೇಮಕವನ್ನು ಬದಲಾಯಿಸುವ ಕೋರಿಕೆಯನ್ನು ಪರಿಗಣಿಸಿ, ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಉಪ ನಿಬಂಧಕರ ಶಿಫಾರಸ್ಸಿನಂತೆ ಸಂಘದ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ಆಡಳಿತಾಧಿಕಾರಿಯಾಗಿರುವ ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಬದಲಾಯಿಸಿ ಶ್ರೀ. ಹರೀಶ್ ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಇ 71 ಸಿಎಸ್‌ಆರ್ 2023

ಬೆಂಗಳೂರು, ದಿನಾಂಕ: 07.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಅಖಿಲ ಕರ್ನಾಟಕ ಕೊರಮರ ಸಂಘ, ನಂ.19, ಜರ್ನಲಿಸ್ಟ್ ಕಾಲೋನಿ, ಮಾವಳ್ಳಿ ಟ್ಯಾಂಕ ಬಂಡ್ ರಸ್ತೆ, ಬೆಂಗಳೂರು, ಈ ಸಂಘದ ಪ್ರಸ್ತುತ ಆಡಳಿತಾಧಿಕಾರಿಯಾಗಿರುವ ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಬದಲಾಯಿಸಿ ಶ್ರೀ. ಹರೀಶ್ ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-258

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಭಾವಸಾರ ಕ್ಷತ್ರಿಯ ಮಂಡಳಿ, ವಿದುರಾಶ್ವತ್ಥ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :- 1. **ಸರ್ಕಾರದ ಆದೇಶ ಸಂಖ್ಯೆ: ಸಿಒ 82 ಸಿಎಸ್‌ಆರ್ 2022 ಬೆಂಗಳೂರು, ದಿನಾಂಕ:** 26.04.2023 **ಮತ್ತು** 16.01.2024.

2. ಸಹಕಾರ ಸಂಘಗಳ ಉಪ ನಿಬಂಧಕರು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪತ್ರ ಸಂಖ್ಯೆ: ಡಿಆರ್ ಸಿ/ಸಂಘ-ಸಂಸ್ಥೆ/ಸಿಆರ್-109/2009-10/2019-20, ದಿನಾಂಕ:28.02.2024, 09.07.2024, 05.11.2024 ಮತ್ತು 11.02.2025.

*****

ಪ್ರಸ್ತಾವನೆ:

ಮೇಲೆ ಓದಲಾದ **(1)** ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ **1960**ರ ಕಲಂ **27-ಎ** ರನ್ವಯ ಭಾವಸಾರ ಕ್ಷತ್ರಿಯ ಮಂಡಳಿ, ವಿದುರಾಶ್ವತ್ಥ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಈ ಸಂಘಕ್ಕೆ ಶ್ರೀಮತಿ. ಭವ್ಯ. ಜೆ. ಆರ್., ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಚಿಕ್ಕಬಳ್ಳಾಪುರ ಉಪವಿಭಾಗ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ **(2)**ರ ಪತ್ರಗಳಲ್ಲಿ ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸುವಂತೆ ಹಾಗೂ ಆಡಳಿತಾಧಿಕಾರಿಗಳು ಸಂಘದ ಚುನಾವಣೆಯನ್ನು ನಡೆಸಲು ಎಲ್ಲಾ ಸಿದ್ಧತೆ ಮಾಡಿಕೊಂಡಿರುವುದರಿಂದ, ಸಂಘದ ಚುನಾವಣೆ ನಡೆಸಲು ಅನುವಾಗುವಂತೆ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ:**25.04.2024**ಕ್ಕೆ ಮುಕ್ತಾಯಗೊಂಡಿರುವುದರಿಂದ, ಉಪ ನಿಬಂಧಕರ ಕೋರಿಕೆಯನ್ನು ಪರಿಶೀಲಿಸಿ, ಸಂಘದ ಪ್ರಸ್ತುತ ಇರುವ ಆಡಳಿತಾಧಿಕಾರಿ ಶ್ರೀಮತಿ. ಭವ್ಯ. ಜೆ. ಆರ್., ಮಾರಾಟಾಧಿಕಾರಿ ಇವರನ್ನು ಮುಂದುವರೆಸಿ, ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:**26.04.2024** ರಿಂದ ದಿನಾಂಕ:**25.10.2024**ರವರೆಗೆ, ದಿನಾಂಕ:**26.10.2024** ರಿಂದ **25.04.2025**ರವರೆಗೆ ಮತ್ತು ದಿನಾಂಕ: **26.04.2025** ಮುಂದಿನ **06** ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 82 ಸಿಎಸ್‌ಆರ್ 2022

ಬೆಂಗಳೂರು, ದಿನಾಂಕ: 07.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ **1960**ರ ಕಲಂ **27-ಎ** ರನ್ವಯ ಭಾವಸಾರ ಕ್ಷತ್ರಿಯ ಮಂಡಳಿ, ವಿದುರಾಶ್ವತ್ಥ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಈ ಸಂಘದ ಪ್ರಸ್ತುತ ಇರುವ ಆಡಳಿತಾಧಿಕಾರಿ ಶ್ರೀಮತಿ. ಭವ್ಯ. ಜೆ. ಆರ್., ಮಾರಾಟಾಧಿಕಾರಿ ಇವರನ್ನು ಮುಂದುವರೆಸಿ, ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:**26.04.2024** ರಿಂದ ದಿನಾಂಕ:**25.10.2024**ರವರೆಗೆ, ದಿನಾಂಕ:**26.10.2024** ರಿಂದ **25.04.2025**ರವರೆಗೆ ಮತ್ತು ಅಂತಿಮವಾಗಿ ದಿನಾಂಕ: **26.04.2025** ಮುಂದಿನ **06** ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-259

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕರ್ನಾಟಕ ರಾಜ್ಯ ಸವಿತಾ ಸಮಾಜ, ನಂ.21, ಸವಿತಾ ಭವನ, ಜರ್ನಲಿಸ್ಟ್ ಕಾಲೋನಿ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ : ಸಇ 129 ಸಸಂನೋ 2016 ಬೆಂಗಳೂರು, ದಿನಾಂಕ: 02.04.2024, 07.12.2024 ಮತ್ತು 23.04.2025.

2. ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ ಇವರ ಪತ್ರ ಸಂಖ್ಯೆ:ಡಿಆರ್‌ಬಿ-2/ಸಂಸಂ/01/2018-19, ದಿನಾಂಕ:12.09.2025

*****

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸವಿತಾ ಸಮಾಜ, ಈ ಸಂಘಕ್ಕೆ ಶ್ರೀ ಹರೀಶ್ ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಆನೇಕಲ್ ಇವರನ್ನು ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿತ್ತು. ನಂತರ ಕಾಲಕಾಲಕ್ಕೆ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:6455/2025ರ ದಿನಾಂಕ:11.03.2025ರ ಆದೇಶದಂತೆ ಸಂಘದ 2003ರ ಬೈಲಾ ರೀತ್ಯ ಚುನಾವಣೆಯನ್ನು ನಡೆಸಲು ಮತದಾರರ ಪಟ್ಟಿ ಸಿದ್ಧ ಪಡಿಸಬೇಕಾಗಿರುವುದರಿಂದ ಚುನಾವಣೆಯನ್ನು ನಡೆಸಲು ಸಾಕಷ್ಟು ಕಾಲಾವಕಾಶ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:01.10.2025ಕ್ಕೆ ಮುಕ್ತಾಯಗೊಂಡಿರುವುದರಿಂದ ಉಪ ನಿಬಂಧಕರ ಶಿಫಾರಸ್ಸಿನಂತೆ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 02.10.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 109 ಸಿಎಸ್‌ಆರ್ 2025(ಸಇ 129 ಸಸಂನೋ 2016)

ಬೆಂಗಳೂರು, ದಿನಾಂಕ: 05.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕರ್ನಾಟಕ ರಾಜ್ಯ ಸವಿತಾ ಸಮಾಜ, ನಂ.21, ಸವಿತಾ ಭವನ, ಜರ್ನಲಿಸ್ಟ್ ಕಾಲೋನಿ,

ಬೆಂಗಳೂರು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:02.10.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಮಾಡಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-260

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ, ಕಸ್ತೂರಬಾ ರಸ್ತೆ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
5. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂ.:ಆರ್‌ಸಿಎಸ್/ಸಂಘ ಸಂಸ್ಥೆ-02/01/2025-26, ದಿನಾಂಕ: 07.05.2025.
6. ಸರ್ಕಾರದ ನೋಟೀಸ್ ಸಂ:ಸಿಒ 146 ಸಿ.ಎಸ್.ಆರ್ 2025, ದಿನಾಂಕ: 15.05.2025.
7. ಪ್ರಧಾನ ಕಾರ್ಯದರ್ಶಿ, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ, ಇವರ ಲಿಖಿತ ಸಮಜಾಯಿಷಿ ದಿನಾಂಕ:27.05.2025.
8. ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್‌ಬಿ-4/ವಾಲೇಪ/ದೂರು/127/2023-24, ದಿನಾಂಕ:20.08.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ,(ನೋಂದಣಿ ಸಂಖ್ಯೆ:DRB4/SOR/263/2018-19) ಕಸ್ತೂರಬಾ ರಸ್ತೆ, ಬೆಂಗಳೂರು ಈ ಸಂಘದ ಕಾರ್ಯಕಾರಿ ಮಂಡಳಿಗೆ ಚುನಾವಣೆಯನ್ನು ನಿಯಮಿತ ಕಾಲದಲ್ಲಿ ನಡೆಸದೆ ಇದ್ದುದರಿಂದ ಸಂಘದ ವಿರುದ್ಧ ದೂರು ಅರ್ಜಿಗಳು ಸ್ವೀಕೃತವಾಗಿದ್ದು, ಅದರಂತೆ ಸಂಘದ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸುವಂತೆ ಜಿಲ್ಲಾ ನೋಂದಣಾಧಿಕಾರಿಗಳು ಹೊರಡಿಸಿದ್ದ ಆದೇಶವನ್ನು ಧಿಕ್ಕರಿಸಿ ಚುನಾವಣೆಯನ್ನು ನಡೆಸದೆ, ಸಂಘದ ವತಿಯಿಂದ ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಿದ್ದು, ಸಂಘದ ಸದಸ್ಯರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಮತ್ತು ರಾಜ್ಯದ ಕ್ರೀಡಾಪಟುಗಳ ಹಿತದೃಷ್ಟಿಯಿಂದ ಹಾಗೂ ನ್ಯಾಯಯುತವಾಗಿ ಕ್ರೀಡಾ ಸೌಲಭ್ಯಗಳನ್ನು ಕೊಡಿಸುವ ನಿಟ್ಟಿನಲ್ಲಿ, ಸಂಘದ ಚುನಾವಣೆಯನ್ನು ಇಲಾಖಾ ವತಿಯಿಂದ ನಡೆಸಿಕೊಡುವಂತೆ ಸಂಘದ ಸದಸ್ಯರು ಕೋರಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಅಭಿಪ್ರಾಯಪಟ್ಟು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ

ಅಧಿನಿಯಮ 1960 ರ ಕಲಂ 27 (ಎ) ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ನಿಬಂಧಕರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3)ರ ಲಿಖಿತ ಹೇಳಿಕೆಯಲ್ಲಿ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಸನ್ ಆಫ್ ಕರ್ನಾಟಕ (ರಿ) ಈ ಸಂಸ್ಥೆಯು ಬಾರತೀಯ ಬಾಲ್ ಬ್ಯಾಡ್ಮಿಂಟನ್ ಫೆಡರೇಷನ್ ಇದರ ಮಾನ್ಯತೆ ಪಡೆದ ಸಂಸ್ಥೆಯಾಗಿದ್ದು, ಫೆಡರೇಶನ್ ನಿರ್ದೇಶನದಂತೆ ನಿಗದಿತ ಸಮಯದಲ್ಲಿ ಪ್ರಜಾಪ್ರಭುತ್ವ ವಿಧಾನದಲ್ಲಿ ಚುನಾವಣೆಗಳನ್ನು ನಡೆಸಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯ ಚುನಾವಣೆಗೆ ಇಲಾಖೆಯಿಂದ ಯಾವ ವೀಕ್ಷಕರು ಬಂದಿರುವುದಿಲ್ಲ. ಸದರಿ ಚುನಾವಣೆಗೆ ಪೆಡರೇಷನ್‌ನ ಪ್ರಧಾನ ಕಾರ್ಯದರ್ಶಿಗಳು ವೀಕ್ಷಕರಾಗಿ ಭಾಗವಹಿಸಿದ್ದು, ಪ್ರಸ್ತುತ ಇರುವ ರಾಜ್ಯ ಸಂಸ್ಥೆಯ ಬೈಲಾದಲ್ಲಿ ಚುನಾವಣೆ ನಡೆಸುವ ಕುರಿತು ಸ್ಪಷ್ಟವಾದ ನಿಯಮ ಹಾಗೂ ನಿರ್ದೇಶನಗಳು ಇಲ್ಲದೇ ಇರುವುದರಿಂದ NSDC-2011 ಹಾಗೂ ಭಾರತೀಯ ಬಾಲ್ ಬ್ಯಾಡ್ಮಿಂಟನ್ ಫೆಡರೇಷನ್ ಇದರ ನಿರ್ದೇಶನದೊಂದಿಗೆ ದಿನಾಂಕ:17.02.2024 ರಂದು ಸಂಸ್ಥೆಯ ಚುನಾವಣೆಯನ್ನು ನಡೆಸಿದ್ದು, ಜಿಲ್ಲಾ ನೋಂದಣಾಧಿಕಾರಿಗಳು ಸಂಸ್ಥೆಯ ಚುನಾವಣೆ ನಡೆಸುವಂತೆ ನೀಡಿದ ಆದೇಶಕ್ಕೆ ಉತ್ತರವಾಗಿ ಸಂಸ್ಥೆಯ ಚುನಾವಣೆ ನಡೆಸಲು ಬೈಲಾದಲ್ಲಿ ಲೋಪ ದೋಷಗಳಿರುವುದರಿಂದ ನಿರ್ದೇಶನ ಕೋರಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಮನವಿ ಮಾಡಿದ್ದು, ಸಂಸ್ಥೆಗೆ ಸರ್ಕಾರದ ಯಾವುದೇ ಅನುದಾನ ಇಲ್ಲದಿದ್ದರೂ ಸಂಸ್ಥೆಯ ಸದಸ್ಯರ ಮೂಲಕ ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸಿದ್ದು, ಆಡಳಿತಾಧಿಕಾರಿಯನ್ನು ನೇಮಕ ಮಾಡಿದಲ್ಲಿ ಸಂಸ್ಥೆಯ ಕ್ರೀಡಾ ಪಟುಗಳಿಗೆ ತುಂಬಲಾಗದ ನಷ್ಟ ಸಂಭವಿಸಲಿದ್ದು ಕ್ರೀಡೆಗೆ ಹಿನ್ನಡೆಯಾಗುವ ಹಿನ್ನೆಲೆಯಲ್ಲಿ, ಸಂಸ್ಥೆಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆ ಹಾಗೂ ಸಂಸ್ಥೆಯ ಬೈಲಾ ಲೋಪದೋಷಗಳನ್ನು ತಿದ್ದುಪಡಿ ಮಾಡಲು ಸೂಕ್ತ ನಿರ್ದೇಶನ ನೀಡಿ, ನಂತರ ಚುನಾವಣೆಯನ್ನು ನಡೆಸಲು ಕಾಲಾವಕಾಶವನ್ನು ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (4)ರ ಸ್ಪಷ್ಟ ಅಭಿಪ್ರಾಯದ ವರದಿಯಲ್ಲಿ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ, ಈ ಸಂಘದ ವಿರುದ್ಧ ಸ್ವೀಕೃತವಾದ ದೂರು ಅರ್ಜಿಗಳ ಕುರಿತು ವಿಚಾರಣೆಯಲ್ಲಿ ಸಂಘದ ಉಪನಿಯಮ ಸಂಖ್ಯೆ-26ನ್ನು ಉಲ್ಲಂಘಿಸಿ ಚುನಾವಣೆ ನಡೆಸಿರುವುದರಿಂದ, ಸಂಘದ ಕಾರ್ಯಕಾರಿ ಸಮಿತಿಗೆ ಸಂಘದ ಉಪನಿಯಮ ರೀತ್ಯಾ ಚುನಾವಣೆ ನಡೆಸಲು ಎರಡು ಬಾರಿ ಸೂಚಿಸಿದರೂ ಸಹ ಈವರೆಗೂ ಚುನಾವಣೆಯನ್ನು ನಡೆಸಿರುವುದಿಲ್ಲ. ಈ ಕುರಿತು ಹಲವಾರು ದೂರು ಅರ್ಜಿಗಳು ಸ್ವೀಕೃತವಾಗಿರುವ ಕಾರಣ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆಡಳಿತಾಧಿಕಾರಿಯ ಮುಖಾಂತರ ಸಂಘದ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಶಿಫಾರಸ್ಸನ್ನು ಮಾಡಲಾಗಿತ್ತು. ಸಂಘವು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಿರುವ ಪತ್ರದಲ್ಲಿ ಸಂಸ್ಥೆಯ ಬೈಲಾ ತಿದ್ದುಪಡಿ ಮಾಡಿಕೊಂಡು ಚುನಾವಣೆಯನ್ನು ನಡೆಸುವಂತೆ ಮಾಡಿದ್ದ ಕೋರಿಕೆಯನ್ನು ಪರಿಶೀಲಿಸಿ ತಿರಸ್ಕರಿಸಲಾಗಿದ್ದು, ಭಾರತೀಯ ಬಾಲ್ ಬ್ಯಾಡ್‌ಮಿಂಟನ್ ಫೆಡರೇಶನ್‌ರವರ ನಿರ್ದೇಶನವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕ್ಕೆ ಅನ್ವಯಿಸುವುದಿಲ್ಲವೆಂದು, ಸರ್ಕಾರದ ನೋಟೀಸಿಗೆ ಸಂಘವು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಮನವಿಯನ್ನು ತಿರಸ್ಕರಿಸುವಂತೆ ಕೋರಿ, ಕರ್ನಾಟಕ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27 (ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಅಭಿಪ್ರಾಯಿಸಿ ವರದಿಯನ್ನು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಮತ್ತು ಸಂಘದ ಲಿಖಿತ ಹೇಳಿಕೆ ಹಾಗೂ ಉಪ ನಿಬಂಧಕರ ಸ್ಪಷ್ಟ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸಂಘದ ಆಡಳಿತ ಮಂಡಳಿಯು ಸಂಘದ ಬೈಲಾ ಸಂಖ್ಯೆ-26ನ್ನು ಉಲ್ಲಂಘಿಸಿ ಚುನಾವಣೆ ನಡೆಸಿರುವ ಕಾರಣ ಸಂಘದ ಉಪನಿಯಮದಂತೆ ಚುನಾವಣೆಯನ್ನು ನಡೆಸಲು ಜಿಲ್ಲಾ ನೋಂದಣಾಧಿಕಾರಿಗಳ ಸೂಚಿಸಿದರೂ ಸಂಘವು ಚುನಾವಣೆ ನಡೆಸದೆ ಇರುವ ಹಿನ್ನಲೆಯಲ್ಲಿ ಸಂಘದ ಹಿತದೃಷ್ಟಿಯಿಂದ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ, ಅವರ ನೇತೃತ್ವದಲ್ಲಿ ಚುನಾವಣೆ ನಡೆಸಿ, ನೂತನ ಚುನಾಯಿತ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಮನಗಂಡು ಕರ್ನಾಟಕ

ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ. 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 146 ಸಿಎಸ್ಆರ್ 2025

ಬೆಂಗಳೂರು, ದಿನಾಂಕ: 07.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ,(ನೋಂದಣಿ ಸಂಖ್ಯೆ:DRB4/SOR/263/2018-19) ಕಸ್ತೂರಬಾ ರಸ್ತೆ, ಬೆಂಗಳೂರು ಈ ಸಂಘಕ್ಕೆ ಶ್ರೀ ಚಂದ್ರಶೇಖರ. ಎನ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರವನ್ನು ವಹಿಸಿಕೊಂಡು, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-261

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೂಡಲ ಸಂಗಮ ಎಜುಕೇಷನ್ ಸೊಸೈಟಿ, ಕಲಬುರಗಿ ಈ ಸಂಸ್ಥೆಯ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:- 9. ಸರ್ಕಾರದ ಆದೇಶ ಸಂಖ್ಯೆ: ಸಿಒ 237 ಸಿಎಸ್ಆರ್ 2024, ಬೆಂಗಳೂರು, ದಿನಾಂಕ: 19.03.2025.

10. ಸಹಕಾರ ಸಂಘಗಳ ಉಪ ನಿಬಂಧಕರು, ಕಲಬುರಗಿ ಜಿಲ್ಲೆ ಇವರ ಪತ್ರ ಸಂಖ್ಯೆ;ಉನಿಕ/ವಿ10/ಸಂ.ಸಂ/2025-226/1037, ದಿನಾಂಕ:01.09.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕೂಡಲ ಸಂಗಮ ಎಜುಕೇಷನ್ ಸೊಸೈಟಿ ಕಲಬುರಗಿ ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. .

ಮೇಲೆ ಓದಲಾದ (2)ರ ಪತ್ರದಲ್ಲಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿಯನ್ನು ನೇಮಿಸಿ, ಚುನಾವಣೆಯನ್ನು ನಿಗಧಿಪಡಿಸಲಾಗಿತ್ತು. ಆದರೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:202441/2025 ಪ್ರಕರಣದಲ್ಲಿ ಸಂಘದ ಚುನಾವಣೆಗೆ ದಿನಾಂಕ:13.08.2025ರಂದು ತಡೆಯಾಜ್ಞೆ ನೀಡಿದ ಕಾರಣ

ಸಂಘದ ಚುನಾವಣೆಯನ್ನು ನಡೆಸಲು ಸಾಧ್ಯವಾಗಿರದ ಹಿನ್ನೆಲೆಯಲ್ಲಿ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು 06 ತಿಂಗಳ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ..

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ: 18.09.2025ಕ್ಕೆ ಮುಕ್ತಾಯಗೊಂಡಿರುವುದರಿಂದ ಸಹಕಾರ ಸಂಘಗಳ ಉಪ ನಿಬಂಧಕರು, ಕಲಬುರಗಿ ಜಿಲ್ಲೆ ಇವರ ಪ್ರಸ್ತಾವನೆಯಂತೆ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 19.09.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಓ 237 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 05.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕೂಡಲ ಸಂಗಮ ಎಜುಕೇಷನ್ ಸೊಸೈಟಿ ಕಲಬುರಗಿ, ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 19.09.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಲು ಕ್ರಮವಹಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-262

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: "ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ – ಆವೃತ್ತಿ-2 (KSAPCC V-2)" ಪರಿಣಾಮಕಾರಿ ಅನುಷ್ಠಾನಕ್ಕಾಗಿ 'ಇಲಾಖಾ ಉಸ್ತುವಾರಿ ಸಮಿತಿ' ಮತ್ತು ಇಲಾಖಾ ಮೌಲ್ಯಮಾಪನ ಸಮಿತಿ' ರಚಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಟಿಪ್ಪಣಿ ಸಂಖ್ಯೆ:ಮುಕಾ/9731869/2025 ದಿನಾಂಕ:19.03.2025.
2. ಸರ್ಕಾರದ ಆದೇಶ ಸಂಖ್ಯೆ:ಅಪಜೀ 151 ಇಎನ್‌ವಿ 2024 ದಿನಾಂಕ:24.03.2025.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಎನಜಿ 220 ವಿಎಸ್‌ಸಿ 2025 ದಿನಾಂಕ:02.06.2025
4. ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಅಪಜೀ 151 ಇಎನ್‌ವಿ 2024 ದಿನಾಂಕ:10.07.2025.

.....

ಪ್ರಸ್ತಾವನೆ:

ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ ಹಾಗೂ ಕಾರ್ಯ ನಿರ್ವಹಣೆಯನ್ನು ಬದಲಾಯಿಸಿ ಜೀವನ ಮಾರ್ಗ, ಆರೋಗ್ಯದ ಅಪಾಯಗಳು ಮತ್ತು ಅಭಿವೃದ್ಧಿಯ ಲಾಭಗಳನ್ನು ಸಾಕಷ್ಟು ಕುಂಠಿತಗೊಳಿಸುವಲ್ಲಿ ಹವಾಮಾನ ಬದಲಾವಣೆಯ

ಪಾತ್ರವಿದೆಯೆಂದು ಭಾವಿಸಲಾಗಿದ್ದು, ಇದಕ್ಕೆ ಸ್ಪಂದಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ರಾಜ್ಯದ ಹವಾಮಾನ ಬದಲಾವಣೆಯ ಮೇಲಿನ ಕ್ರಿಯಾ ಯೋಜನೆಯನ್ನು (SAPCC) 2015 ರಲ್ಲಿ ರೂಪಿಸಿ 2021 ರಲ್ಲಿ ಪರಿಷ್ಕರಿಸಿರುತ್ತದೆ.

ಮುಂದುವರೆದು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ "ಹವಾಮಾನ ಬದಲಾವಣೆ ಮೇಲಿನ ರಾಜ್ಯ ಕ್ರಿಯಾ ಯೋಜನೆಯ ಪರಿಷ್ಕರಣೆಗಾಗಿನ ಸಮಾನ ಮಾರ್ಗಸೂಚಿಗಳು" ಅನುಸಾರವಾಗಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯು ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಮೇಲಿನ ಕ್ರಿಯಾಯೋಜನೆ ಆವೃತ್ತಿ-2 (KSAPCC V-2) ಸಿದ್ಧಪಡಿಸಿದ್ದು, ದಿನಾಂಕ:16.02.2024 ರಂದು ಜರುಗಿದ ಭಾರತ ಸರ್ಕಾರದ ಹವಾಮಾನ ಬದಲಾವಣೆ ಮೇಲಿನ ರಾಷ್ಟ್ರೀಯ ಚಾಲನಾ ಸಮಿತಿಯು (National Steering Committee on Climate Change-NSCCC) KSAPCC V-2 ಅನುಮೋದಿಸಿದೆ.

ತಾಪಮಾನ ಹೆಚ್ಚಳ, ಮಳೆ ಸುರಿಯುವ ವಿಧಾನಗಳು, ಹವಾಮಾನ ವೈಪರೀತ್ಯದ ಘಟನೆಗಳ ಹೆಚ್ಚಳಗಳಿಂದಾಗಿ ನಮ್ಮ ಅರಣ್ಯಗಳಿಗೆ ಉಂಟಾಗುವ ಅಪಾಯ, ನೀರಿನ ಉಪಲಬ್ಧತೆ, ಬೆಳೆ ಇಳುವರಿ ಮತ್ತು ಜೀವನಾಧಾರ ಆದಾಯ ಸುರಕ್ಷತೆ ಸೂಚಿಸುವ 2030 ರ ನಂತರದ ವರ್ಷ ಗಳ ಹವಾಮಾನ ಸಾಧ್ಯತೆಗಳ ಬಗ್ಗೆ ಕ್ಷೇತ್ರವಾರು ಮರುಹೊಂದಾಣಿಕೆ ಮತ್ತು ತಡೆಗಟ್ಟುವ ನಿರ್ದಿಷ್ಟ ತಂತ್ರಗಳನ್ನು KSAPCC V-2 ಒಳಗೊಂಡಿದೆ. ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸುವ ಕಾರ್ಯ ವಿಧಾನಗಳ ಉಸ್ತುವಾರಿ ಮತ್ತು ಮೌಲ್ಯಮಾಪನದ ಚೌಕಟ್ಟನ್ನು ಸಹ ಇದು ಒಳಗೊಂಡಿದೆ. ರಾಜ್ಯದ ಉದ್ದಗಲದಲ್ಲಿನ ಸೂಚಿತ ಕ್ಷೇತ್ರಗಳ ಮೇಲಿನ ಹವಾಮಾನ ಬದಲಾವಣೆಯ ವಿವಿಧ ಪರಿಣಾಮಗಳನ್ನು ಗುರುತಿಸಿ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವ ಕ್ಷಮತೆಯನ್ನು ವೃದ್ಧಿಸುವುದಕ್ಕಾಗಿ ರಾಜ್ಯಮಟ್ಟದಲ್ಲಿ ಅಳವಡಿಕೆ ಮತ್ತು ತಡೆಗಟ್ಟುವ ಕ್ರಮಗಳ ಅನುಷ್ಠಾನಕ್ಕಾಗಿ KSAPCC V-2 ಪ್ರಸ್ತಾಪಿಸುತ್ತದೆ. ಈ ನಿಟ್ಟಿನಲ್ಲಿ KSAPCC V-2 ಅನ್ನು ಮುಖ್ಯವಾಹಿನಿಗೆ ತರುವುದು ಅತಿ ಪ್ರಮುಖ ಕಾರ್ಯವಾಗಿದೆ ಎಂದು ತಿಳಿಸಿ, ರಾಜ್ಯದಲ್ಲಿ ಹವಾಮಾನ ಬದಲಾವಣೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಸಂಬಂಧ ಈ ಕ್ರಿಯಾ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಹಾಗೂ ಈ ಯೋಜನೆಯಲ್ಲಿ ಶಿಫಾರಸ್ಸು ಮಾಡಲಾದ ಚೌಕಟ್ಟುಗಳ ಕಾರ್ಯಾನುಷ್ಠಾನದ ಮೌಲ್ಯಮಾಪನ ಮತ್ತು ಪರಿವೀಕ್ಷಣೆಯ ಸಲುವಾಗಿ ಸಂಬಂಧಿತ ಇಲಾಖೆಗಳಲ್ಲಿ ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಸಮಿತಿಗಳನ್ನು ರಚಿಸುವುದು ಅಗತ್ಯವಾಗಿದೆ ಎಂದು ತಿಳಿಸಿ ಇಲಾಖಾ ಉಸ್ತುವಾರಿ ಸಮಿತಿ (Departmental Monitoring Committee (DMC)) ಮತ್ತು ಇಲಾಖಾ ಮೌಲ್ಯ ಮಾಪನ ಸಮಿತಿ(Departmental Evaluation Committee (DEC)) ರಚಿಸಲು ಮೇಲೆ ಓದಲಾದ (2) ರಂತೆ ಆದೇಶಿಸಲಾಗಿದೆ.

ಮುಂದುವರೆದು, ಮೇಲೆ ಓದಲಾದ(1) ರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿಯಲ್ಲಿ KSAPCC V-2 ರ ಕಾರ್ಯಕ್ಷಮತೆ ಸೂಚಕಗಳು (Key Performance Indicators) ಗಳಿಗೆ ಸರ್ಕಾರ ಅನುಮೋದನೆ ನೀಡಿದ್ದು, ಪ್ರತಿ ತಿಂಗಳು ನಡೆಸುವ ಕಾರ್ಯದರ್ಶಿಗಳ ಸಭೆಯಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿರುತ್ತಾರೆ. KSAPCC V-2 ಗೆ ಸಂಬಂಧಿಸಿದಂತೆ ಇಂಧನ ಇಲಾಖೆಯಿಂದ ಪ್ರಸ್ತುತ ಸಲ್ಲಿಸಿರುವ Key Performance Indicators ಈ ಕೆಳಗಿನಂತಿವೆ:

Sl No	Identified KPIs	Administrative Agency
1	Rooftop Solar	All ESCOMs/Govt of India (MNRE)
2	Solar Powered IP sets (PM KUSUM-B)	KREDL
3	Decentralised Solar Plants-Solarization of feeders (PM	All ESCOMs/KREDL

	KUSUM-C)	
4	Solar Ground mounted projects	KREDL
5	Implementation of Wind Power projects	KREDL
6	R&M of RTPS	KPCL
7	Energy Storage Systems	KREDL/KPTCL

ಮೇಲೆ ಓದಲಾದ (3) ರಂತೆ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕೆಡಲ್ ಇವರನ್ನು "ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ ಆವೃತ್ತಿ-2" (KSAPCC V2) ಅನುಷ್ಠಾನ, "Green Index Portal" ಮತ್ತು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (EMPRI) ಯಿಂದ ಅನುಷ್ಠಾನಗೊಳಿಸುವ ಎಲ್ಲಾ ಕಾರ್ಯಕ್ರಮಗಳಿಗೆ ಇಂಧನ ಇಲಾಖೆಯಿಂದ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಜೀವಿಪರಿಸ್ಥಿತಿ ಮತ್ತು ಪರಿಸರ) ಇವರು DMC ಮತ್ತು DEC ಗಳ Terms of Reference/Roles and Responsibilities ಕುರಿತು ಮೇಲೆ ಓದಲಾದ (4) ರ ಅನಧಿಕೃತ ಟಿಪ್ಪಣಿಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ KSAPCC V-2 ರ Key Performance Indicators ಸಂಬಂಧಿಸಿದ ಮಾಹಿತಿಗಳು ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಮಟ್ಟದಲ್ಲಿ ಪರಿಶೀಲನೆಯಾಗುವುದರಿಂದ, ರಾಜ್ಯದಲ್ಲಿ ಹವಾಮಾನ ಬದಲಾವಣೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಸಂಬಂಧ KSAPCC V-2 ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮೇಲೆ ಓದಲಾದ (2) ರಂತೆ ರಚಿಸಿರುವ ಇಲಾಖಾ ಉಸ್ತುವಾರಿ ಸಮಿತಿ ಮತ್ತು ಇಲಾಖಾ ಮೌಲ್ಯಮಾಪನ ಸಮಿತಿಗಳನ್ನು ಇಂಧನ ಇಲಾಖೆಗೆ ಅನುಗುಣವಾಗಿ ಈ ಕೆಳಗಿನಂತೆ ರಚಿಸಿ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 147 ವಿಎಸ್‌ಸಿ 2025,

ಬೆಂಗಳೂರು, ದಿನಾಂಕ:22.07.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿ ಹವಾಮಾನ ಬದಲಾವಣೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಸಂಬಂಧ KSAPCC V-2 ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಸಲುವಾಗಿ ಅರಣ್ಯ ಇಲಾಖೆಯ ದಿನಾಂಕ:24.03.2025ರ ಆದೇಶದನುಸಾರ ಇಂಧನ ಇಲಾಖೆಯಿಂದ, ಇಲಾಖಾ ಉಸ್ತುವಾರಿ ಸಮಿತಿ ಮತ್ತು ಇಲಾಖಾ ಮೌಲ್ಯಮಾಪನ ಸಮಿತಿಗಳನ್ನು ಈ ಕೆಳಕಂಡಂತೆ ರಚಿಸಿದೆ.

1. ಇಲಾಖಾ ಉಸ್ತುವಾರಿ ಸಮಿತಿ (**DMC**):

1	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ	ಅಧ್ಯಕ್ಷರು
2	ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್	ಸದಸ್ಯರು
3	ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ /ಸೆಸ್ಕ್	ಸದಸ್ಯರು
4	ವ್ಯವಸ್ಥಾಪಕ ನಿರ್ದೇಶಕರು, ಕೆಡಲ್	ಸದಸ್ಯರು
5	ಸರ್ಕಾರದ ಅಪರ ಕಾರ್ಯದರ್ಶಿ, ಇಂಧನ ಇಲಾಖೆ	ಸದಸ್ಯರು

6	ನಿರ್ದೇಶಕರು (ತಾಂತ್ರಿಕ), ಇಎಂಸಿ ಮತ್ತು ಪಿಪಿ ಶಾಖೆ	ಸದಸ್ಯರು
7	ನಿರ್ದೇಶಕರು (ಆರ್ಥಿಕ), ಸುಧಾರಣೆ ಶಾಖೆ	ಸದಸ್ಯರು
8	ಅಪರ ನಿರ್ದೇಶಕರು (ನವೀಕರಿಸಬಹುದಾದ ಇಂಧನ)	ಸದಸ್ಯರು
9	ಯೋಜನಾ ಇಲಾಖೆಯ ನೋಡಲ್ ಅಧಿಕಾರಿ	ಸದಸ್ಯರು
10	ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕ್ರೆಡಲ್	ಸದಸ್ಯ ಕಾರ್ಯದರ್ಶಿ

2. ಇಲಾಖಾ ಮೌಲ್ಯಮಾಪನ ಸಮಿತಿ **(DEC):**

1	ಆಯುಕ್ತರು (ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ)	ಅಧ್ಯಕ್ಷರು
2	ನಿರ್ದೇಶಕರು (ತಾಂತ್ರಿಕ), ಇಎಂಸಿ ಮತ್ತು ಪಿಪಿ ಶಾಖೆ	ಸದಸ್ಯರು
3	ನಿರ್ದೇಶಕರು (ಆರ್ಥಿಕ), ಸುಧಾರಣೆ ಶಾಖೆ	ಸದಸ್ಯರು
4	ಸಂಬಂಧಪಟ್ಟ ವಿ.ಸ.ಕಂ.ಗಳ ಕಾರ್ಪೋರೇಟ್ ಕಛೇರಿಯಲ್ಲಿ ವಿಷಯ ನಿರ್ವಹಿಸುತ್ತಿರುವ ಅಧೀಕ್ಷಕ ಇಂಜಿನಿಯರ್ (ವಿ)	ಸದಸ್ಯರು
5	ಅಪರ ನಿರ್ದೇಶಕರು (ನವೀಕರಿಸಬಹುದಾದ ಇಂಧನ)	ಸದಸ್ಯರು
6	ಸರ್ಕಾರದ ಅಪರ ಕಾರ್ಯದರ್ಶಿ, ಇಂಧನ ಇಲಾಖೆ	ಸದಸ್ಯ ಕಾರ್ಯದರ್ಶಿ

ಮೇಲ್ಕಂಡ ಎರಡೂ ಸಮಿತಿಗಳ Terms of Reference/Roles and Responsibilities ಅನುಬಂಧದಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

"ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ – ಆವೃತ್ತಿ-2 (KSAPCC V-2)" ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಇಂಧನ ಇಲಾಖೆಗನುಗುಣವಾಗಿ 'ಇಲಾಖಾ ಉಸ್ತುವಾರಿ ಸಮಿತಿ' ಮತ್ತು ಇಲಾಖಾ ಮೌಲ್ಯಮಾಪನ ಸಮಿತಿ' ಗಳನ್ನು ಅನುಷ್ಠಾನಗೊಳಿಸಿರುವ ಆದೇಶ ಸಂಖ್ಯೆ:ಎನರ್ಜಿ 147 ವಿಎಸ್‌ಸಿ 2025 ದಿನಾಂಕ:22.07.2025 ರ ಆದೇಶಕ್ಕೆ ಅನುಬಂಧ

1. Departmental Monitoring Committee (DMC)

Objective

To monitor the implementation of sectoral Key Performance Indicators (KPIs) related to climate adaptation and mitigation strategies by the respective departments.

Terms of Reference:

1. The committee is responsible for implementation, review modification or identifying new KPIs and reporting the progress.
2. Conduct quarterly review meetings on KPIs progress.
3. Prepare an action plan detailing resources required and a timeline for KPIs implementation.
4. Identify nodal officers as point of contact for coordination and reporting of KPI's progress in the KSAPCC Monitoring dashboard.
5. Prepare Technical and Financial proposals to funding agencies for adoption of innovative methods/technologies addressing climate adaptation/mitigation.
6. Present the KPIs progress in the review meetings chaired by the Additional Chief Secretary, Department of Forest, Ecology and Environment.
7. Facilitate inter-departmental coordination, especially with the Planning Department/EMPRI, for integrated climate actions.
8. Entrust tasks to the functionaries of the committee including undertaking outreach programs to stakeholders.
9. To ensure that outcomes of climate actions are brought out in the form of a report.
10. The committee may invite any expert in the field for providing their inputs/suggestions regarding KPIs.

2. Departmental Evaluation Committee (DEC)

Objective

To evaluate the effectiveness, efficiency, and impact of KPI's, and departmental climate actions.

Terms of Reference:

1. Formulate a Common framework for Monitoring & Evaluation of KPIs.
2. Conduct quarterly review meetings on KPIs progress & effectiveness.
3. Suggest improvements in the existing KPIs.
4. Evaluate the KPIs, identify the gaps, and communicate to the department for corrective action.
5. Outcomes of evaluation are to be submitted to the Departmental Monitoring Committee (DMC).
6. Facilitate Capacity building on the evaluation methodologies and tools for departmental staff once in 6 months.
7. The committee may invite any expert in the filed for providing their inputs/suggestions regarding KPIs.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

PR-263

ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 131 ವಿಎಸ್‌ಸಿ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 11-11-2025

ತಿದ್ದುಪಡಿ ಆದೇಶ

ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ/183/ವೆಚ್ಚ-1/2025 ದಿನಾಂಕ 05.06.2025ರ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ ಎನರ್ಜಿ 131 ವಿಎಸ್‌ಸಿ 2025 ದಿನಾಂಕ 13.06.2025 ರ ಆದೇಶದ ಭಾಗದಲ್ಲಿ "ಆಯವ್ಯಯ 2024-25ರ ಕಂಡಿಕೆ 294ರಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡಲು 2,500 EV Charging ಕೇಂದ್ರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು" ಎಂಬ ಘೋಷಣೆಯನ್ನು ಕೈಬಿಡಲಾಗಿದೆ.

ಮುಂದುವರೆದು, ವಿದ್ಯುತ್ ಸರಬರಾಜು ಕಂಪನಿಗಳ ಮೂಲಕ 35 ಕೋಟಿ ರೂ. ವೆಚ್ಚದಲ್ಲಿ 100 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ವಹಿಸುವಂತೆ ನೋಡಲ್ ಸಂಸ್ಥೆಯಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಆದೇಶಿಸಿದೆ ಎಂಬುದನ್ನು ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

"ಆಯವ್ಯಯ 2024-25ರ ಕಂಡಿಕೆ 294ರಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡಲು 2,500 EV Charging ಕೇಂದ್ರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು. ಅಲ್ಲದೇ, ವಿದ್ಯುತ್ ಸರಬರಾಜು ಕಂಪನಿಗಳ ಮೂಲಕ 35 ಕೋಟಿ ರೂ. ವೆಚ್ಚದಲ್ಲಿ 100 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು" ಎಂಬ ಘೋಷಣೆಯನ್ನು ಕೈಬಿಡಲಾಗಿದೆ.

ಉಳಿದಂತೆ, ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿನೋದ್ ಕುಮಾರ್ ಡಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

PR-264

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 183 ಎಸ್‌ಜಿಎಫ್ 2025

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:15.09.2025

ಅಧಿಸೂಚನೆ

1. ಕಬ್ಬು (ನಿಯಂತ್ರಣ) ಆದೇಶ 1966ರ ಖಂಡ 6 ರಲ್ಲಿ ಕಬ್ಬು ವಿತರಣೆ ಮತ್ತು ಸಾಗಾಟವನ್ನು ನಿಯಂತ್ರಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವು ಹೊಂದಿದ್ದು, ಈ ಅಧಿಕಾರವನ್ನು ಅಧಿಸೂಚನೆ ಸಂಖ್ಯೆ:G.S.R.1127/ Ess.Com./Sugar, Dated:16th July 1966ರಲ್ಲಿ ರಾಜ್ಯ ಸರ್ಕಾರಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.
2. ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳ ಸಾಮರ್ಥ್ಯವನ್ನು ವಿಸ್ತರಿಸುವ ಹಾಗೂ ಕಾರ್ಖಾನೆಗಳಿಗೆ ಕಬ್ಬು ಮೀಸಲು ಕ್ಷೇತ್ರವನ್ನು ಹಂಚಿಕೆ ಮತ್ತು ಮರು ಹಂಚಿಕೆ ಮಾಡುವ ಬಗ್ಗೆ ರಾಜ್ಯ ಸರ್ಕಾರದ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಪ್ರಕಟಿಸಲಾಗಿದೆ. ಸದರಿ ಆದೇಶದ

ಖಂಡ (3) ರಲ್ಲಿ, ಹೊಸ ಕಾರ್ಖಾನೆಗಳಿಗೆ ಕಬ್ಬಿನ ಮೀಸಲು ಕ್ಷೇತ್ರವನ್ನು 15 ಕಿ.ಮೀ ಅಂತರದೊಳಗೆ ಹಂಚಿಕೆ ಮಾಡತಕ್ಕದ್ದು. ಒಂದು ವೇಳೆ 15 ಕಿ.ಮೀ ಒಳಗಡೆ ಸಾಕಷ್ಟು ಕಬ್ಬು ದೊರೆಯದೆ ಇರುವಂಥ ಸಕಾರಣಗಳಿದ್ದಲ್ಲಿ 15 ಕಿ.ಮೀ ವ್ಯಾಪ್ತಿಯ ಹೊರಗಡೆಯ ಕಬ್ಬಿನ ಮೀಸಲು ಕ್ಷೇತ್ರವನ್ನು ಹಂಚಿಕೆ ಮಾಡಬಹುದು. ಆದರೆ ಈ ರೀತಿ ಹಂಚಿಕೆ ಮಾಡಲಾದ ಪ್ರದೇಶವು ಹಾಲಿ ಇರುವ ಸಕ್ಕರೆ ಕಾರ್ಖಾನೆಗಳ 15 ಕಿ.ಮೀ ವ್ಯಾಪ್ತಿಯ ಹೊರಗಡೆ ಇರತಕ್ಕದ್ದು ಎಂದು ನಿಯಮಿಸಲಾಗಿದೆ.

3. ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆಯ ಸಂಖ್ಯೆ: IEM No.1336/SIA/IMO/2014 Dated:18.09.2014ರಲ್ಲಿ ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ – ಈ ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಕೈಗಾರಿಕಾ ಉದ್ಯಮಿಗಳ ಜ್ಞಾಪಕ ಪತ್ರವನ್ನು (ಐ.ಇ.ಎಂ) ಅನ್ನು ನೀಡಲಾಗಿರುತ್ತದೆ. ಜಂಟಿ ನಿರ್ದೇಶಕರು, ಸಕ್ಕರೆ ಮತ್ತು ವನಸ್ಪತಿ ಎಣ್ಣೆಗಳ ನಿರ್ದೇಶನಾಲಯ, ನವದೆಹಲಿ ಇವರ ಆದೇಶ ಸಂಖ್ಯೆ: 25(2275)2014-ST(C.No.320100) Dated:13.05.2025 ರಲ್ಲಿ ಸದರಿ ಐ.ಇ.ಎಂ.ನ ಅನುಷ್ಠಾನದ ಅವಧಿಯನ್ನು ದಿನಾಂಕ:17.09.2025ರವರೆಗೆ ವಿಸ್ತರಿಸಲಾಗಿರುತ್ತದೆ.

4. ಸರ್ಕಾರದ ಆದೇಶ ಸಂಖ್ಯೆ: ಸಿಐ 122 ಎಸ್‌ಪಿಐ 2015, ದಿನಾಂಕ:04.05.2015ರಲ್ಲಿ ಮೆ.ಎಸ್.ಆರ್.ಕೆ. ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರು ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಇಲ್ಲಿ 5,000 ಟಿ.ಸಿ.ಡಿ ಸಕ್ಕರೆ ಘಟಕ, 30 ಮೆ.ವ್ಯಾಟ್ ಕೋ-ಜನ್ ಘಟಕ ಮತ್ತು 60 ಕೆ.ಎಲ್.ಪಿ.ಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕವನ್ನು ಹೊಸದಾಗಿ ಸ್ಥಾಪಿಸಲು ರಾಜ್ಯ ಸರ್ಕಾರದಿಂದ ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಸಿಐ 225 ಎಸ್‌ಪಿಐ 2025, ದಿನಾಂಕ:24.07.2025ರಲ್ಲಿ ಸದರಿ ತಾತ್ವಿಕ ಅನುಮೋದನೆಯ ಅವಧಿಯನ್ನು ಐ.ಇ.ಎಂ.ನ ಸಿಂಧುತ್ವದ ಅವಧಿಯವರೆಗೆ ವಿಸ್ತರಿಸಲಾಗಿರುತ್ತದೆ.

5. Karnataka Sugarcane (Regulation of Distribution) Kundaragi Order 1998 ರಲ್ಲಿ ಮೆ.ಜೆಮ್ ಶುಗರ್ಸ್ ಲಿ., ಕುಂದರಗಿ ಗ್ರಾಮ, ಬೀಳಗಿ ತಾಲ್ಲೂಕು, ಬಾಗಕೋಟೆ ಜಿಲ್ಲೆ ಇವರಿಗೆ ಬಾಗಲಕೋಟೆ ಜಿಲ್ಲೆಯ 464 ಗ್ರಾಮಗಳನ್ನು ಕಬ್ಬು ಮೀಸಲು ಕ್ಷೇತ್ರವಾಗಿ ಹಂಚಿಕೆ ಮಾಡಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 195 ಎಸ್‌ಜಿಎಫ್ 2005, ದಿನಾಂಕ:11.12.2007 ರಲ್ಲಿ ಮೆ.ಸದಾಶಿವ ಶುಗರ್ಸ್ ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ಬಾಗಲಕೋಟೆ ಜಿಲ್ಲೆಯ ಒಟ್ಟು 69 ಗ್ರಾಮಗಳನ್ನು ಕಬ್ಬು ಮೀಸಲು ಕ್ಷೇತ್ರವಾಗಿ ಹಂಚಿಕೆ ಮಾಡಲಾಗಿರುತ್ತದೆ. ಪ್ರಸ್ತುತ ಸದರಿ ಕಾರ್ಖಾನೆಯ ಹೆಸರು ಮೆ.ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಕೋಟೆ ಜಿಲ್ಲೆ ಎಂದಾಗಿರುತ್ತದೆ.

6. ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಗೆ ಕಬ್ಬು ಮೀಸಲು ಕ್ಷೇತ್ರವನ್ನು ಹಂಚಿಕೆ ಮಾಡುವ ಕುರಿತು ಸಂಬಂಧಪಟ್ಟ ಸಮೀಪದ ಸಕ್ಕರೆ ಕಾರ್ಖಾನೆಗಳೊಂದಿಗೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ:10.02.2015ರಂದು ಸಭೆಯನ್ನು ಜರುಗಿಸಲಾಗಿದೆ. ಮೆ.ಜೆಮ್ ಶುಗರ್ಸ್ ಲಿ., ಕುಂದರಗಿ ಗ್ರಾಮ, ಬೀಳಗಿ ತಾಲ್ಲೂಕು, ಬಾಗಕೋಟೆ ಜಿಲ್ಲೆ ಹಾಗೂ ಮೆ.ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಕೋಟೆ ಜಿಲ್ಲೆ – ಈ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಸದರಿ ಸಭೆಗೆ ಹಾಜರಾಗಿದ್ದು, ಸದರಿ ಸಭೆಯಲ್ಲಿ ಅವರುಗಳ ಸಕ್ಕರೆ ಕಾರ್ಖಾನೆಗಳಿಗೆ ಹಂಚಿಕೆ ಮಾಡಲಾದ ಗ್ರಾಮಗಳನ್ನು ಹಿಂಪಡೆಯದಂತೆ ಕೋರಿರುತ್ತಾರೆ. ಮುಂದುವರಿದು, ಸದರಿ ಸಭೆಯಲ್ಲಿ ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಗೆ ಒಟ್ಟು 84 ಗ್ರಾಮಗಳನ್ನು ಕಬ್ಬು ಮೀಸಲು ಕ್ಷೇತ್ರವನ್ನಾಗಿ ಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ.

7. **ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:21.02.2015, 27.06.2025 ಮತ್ತು 08.07.2025ರ** ಪ್ರಸ್ತಾವನೆಗಳಲ್ಲಿ ಒಟ್ಟಾರೆ ಹುನಗುಂದ ತಾಲ್ಲೂಕಿನ 84 ಗ್ರಾಮಗಳನ್ನು ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ,

ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಗೆ ಕಬ್ಬು ಮೀಸಲು ಕ್ಷೇತ್ರವನ್ನಾಗಿ ಹಂಚಿಕೆ ಮಾಡಲು ಕೋರಿರುತ್ತಾರೆ. ಸದರಿ 84 ಗ್ರಾಮಗಳಲ್ಲಿ 02 ಗ್ರಾಮಗಳು ಮೆ.ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಕೋಟೆ ಜಿಲ್ಲೆ – ಈ ಕಾರ್ಖಾನೆಗೆ ಸಮೀಪದಲ್ಲಿರುತ್ತವೆ.

8. Sugarcane (Control) (Amendment) Order 2006ರ ಕಲಂ **6(ಎ)** ರಲ್ಲಿ ನಿಗದಿಪಡಿಸಿರುವಂತೆ ಎರಡು ಸಕ್ಕರೆ ಕಾರ್ಖಾನೆಗಳ ನಡುವಿನ ಕನಿಷ್ಟ ಅಂತರವನ್ನು 15.00 ಕಿ.ಮೀ ಇರತಕ್ಕದ್ದು ಎಂಬ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007 ರಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಪ್ರಸ್ತುತ ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಕ್ಕರೆ ಕಾರ್ಖಾನೆಗೆ ಹಂಚಿಕೆ ಮಾಡಲು ಪ್ರಸ್ತಾಪಿಸಿರುವ 82 ಗ್ರಾಮಗಳು ಮೆ.ಜೆಮ್ ಶುಗರ್ಸ್ ಲಿ., ಕುಂದರಗಿ ಗ್ರಾಮ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ಮೆ.ಇಐಡಿ ಪ್ಯಾರಿ (ಇಂಡಿಯಾ) ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಗಳಿಂದ ದೂರದಲ್ಲಿರುತ್ತವೆ ಹಾಗೂ ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಕ್ಕರೆ ಕಾರ್ಖಾನೆಗೆ ಸಮೀಪದಲ್ಲಿರುತ್ತವೆ. ಪ್ರಸಕ್ತ ಇರುವ ಕಾರ್ಖಾನೆಗೆ ಹಂಚಿಕೆ ಮಾಡಿರುವ ಹಳ್ಳಿಗಳನ್ನು ಹೊಸ ಕಾರ್ಖಾನೆಗೆ ಮರು ಹಂಚಿಕೆ ಮಾಡಲು ಉದ್ದೇಶಿಸಿದ್ದಲ್ಲಿ; ಅಂಥ ಪ್ರಸ್ತಾವನೆಗಳ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲು ಸಚಿವ ಸಂಪುಟದ ಮುಂದೆ ಮಂಡಿಸಲು ಸರ್ಕಾರದ ಆದೇಶ ಸಂಖ್ಯೆ:ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರ ಖಂಡ 6 ರಲ್ಲಿ ನಿಯಮಿಸಲಾಗಿದೆ. ಈ ಹಿನ್ನೆಲೆಯಲ್ಲಿ, 34 ಗ್ರಾಮಗಳನ್ನು ಮೆ.ಜೆಮ್ ಶುಗರ್ಸ್ ಲಿ., ಕುಂದರಗಿ ಗ್ರಾಮ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯಿಂದ ಮತ್ತು 48 ಗ್ರಾಮಗಳನ್ನು ಮೆ.ಇಐಡಿ ಪ್ಯಾರಿ (ಇಂಡಿಯಾ) ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯಿಂದ ಹಿಂಪಡೆದು ರೈತರ ಹಿತದೃಷ್ಟಿಯಿಂದ ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ160 ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಕ್ಕರೆ ಕಾರ್ಖಾನೆಗೆ ಮರು ಹಂಚಿಕೆ ಮಾಡುವುದು ಸಮಂಜಸವಾಗಿರುತ್ತದೆ.

9. ಈ ಹಿನ್ನೆಲೆಯಲ್ಲಿ, Sugarcane (Control) Order 1966ರ ಖಂಡ 6ರಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರ ಖಂಡ 6 ರಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೆ.ಜೆಮ್ ಶುಗರ್ಸ್ ಲಿ., ಕುಂದರಗಿ ಗ್ರಾಮ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯಿಂದ 34 ಗ್ರಾಮಗಳನ್ನು ಮತ್ತು ಮೆ.ಇ.ಐ.ಡಿ ಪ್ಯಾರಿ (ಇಂಡಿಯಾ) ಲಿ., ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯಿಂದ 48 ಗ್ರಾಮಗಳನ್ನು ಒಳಗೊಂಡು ಒಟ್ಟು **82** ಗ್ರಾಮಗಳನ್ನು ಹಿಂಪಡೆದು, ಸದರಿ 82 ಗ್ರಾಮಗಳನ್ನು ಇದರೊಂದಿಗಿನ ಅನುಬಂಧದಲ್ಲಿರುವಂತೆ ರೈತರ ಹಿತದೃಷ್ಟಿಯಿಂದ ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ. ಸರ್ವೆ ನಂ160 ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಸಕ್ಕರೆ ಕಾರ್ಖಾನೆಗೆ ಕಬ್ಬು ಮೀಸಲು ಕ್ಷೇತ್ರವನ್ನಾಗಿ ಹಂಚಿಕೆ ಮಾಡಿ ಅಧಿಸೂಚಿಸಿದೆ.

ಮೇಲ್ಕಂಡ ಕಬ್ಬು ಮೀಸಲು ಕ್ಷೇತ್ರ ಹಂಚಿಕೆಯು ಕೇಂದ್ರ ಸರ್ಕಾರ/ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ಹೊರಡಿಸುವ ಅಧಿನಿಯಮ / ನಿಯಮಗಳು / ಸೂಚನೆಗಳಿಗೆ ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಎ) ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ. ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯು ಸಕ್ಕರೆ ಕಾರ್ಖಾನೆಯನ್ನು ನಡೆಸಲು ಅಗತ್ಯವಿರುವ ಭಾರತ ಸರ್ಕಾರ / ರಾಜ್ಯ ಸರ್ಕಾರ/ ಸಕ್ಷಮ ಪ್ರಾಧಿಕಾರವು ನೀಡುವ ಚಾಲ್ತಿಯಲ್ಲಿರುವ ಕೈಗಾರಿಕಾ ಲೈಸೆನ್ಸ್ ಅನ್ನು ಹೊಂದಿರತಕ್ಕದ್ದು.

ಬಿ) ಈ ಅಧಿಸೂಚನೆ ಮೂಲಕ ಹಂಚಿಕೆ ಮಾಡಿರುವ ಕಬ್ಬು ಮೀಸಲು ಕ್ಷೇತ್ರದ ಗ್ರಾಮಗಳಲ್ಲಿ ರೈತರು ಹೆಚ್ಚು ಕಬ್ಬು ಬೆಳೆಯಲು ಪ್ರೋತ್ಸಾಹಿಸುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು. ಕಬ್ಬು ಮೀಸಲು ಕ್ಷೇತ್ರವನ್ನು ಹಂಚಿಕೆ ಪಡೆದ ಕಾರ್ಖಾನೆಯು ಅನುಬಂಧದಲ್ಲಿ ನಿಗಧಿಪಡಿಸಿರುವ ಪ್ರದೇಶದಿಂದಲೇ ಕಬ್ಬನ್ನು ಪಡೆಯತಕ್ಕದ್ದು. ಈ ಕಾರ್ಖಾನೆಯು ಪ್ರಾರಂಭವಾಗುವವರೆಗೆ ತಾತ್ಕಾಲಿಕವಾಗಿ ಈ ಹಿಂದೆ ಹಂಚಿಕೆ ಪಡೆದಿದ್ದ ಸಕ್ಕರೆ ಕಾರ್ಖಾನೆಗಳು ರೈತರಿಂದ ಕಬ್ಬನ್ನು ಖರೀದಿಸಬಹುದಾಗಿದೆ.

ಸಿ) ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ. ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವು 5,000 ಟಿ.ಸಿ.ಡಿ ಇರುತ್ತದೆ.

ಡಿ) ಕಬ್ಬು ಮೀಸಲು ಪ್ರದೇಶದ ಪ್ರತಿ ಕಬ್ಬು ಬೆಳೆಗಾರ ತಾನು ಬೆಳೆದ ಕಬ್ಬಿನ ಶೇ.95 ರಷ್ಟನ್ನು ಮೇಲ್ಕಂಡ ಕಾರ್ಖಾನೆಗೆ ನೇರವಾಗಿ ಅಥವಾ ಕಬ್ಬು ಬೆಳೆಗಾರರ ಸಹಕಾರಿ ಸಂಘದ ಮೂಲಕ ಸರಬರಾಜು ಮಾಡುವುದು.

ಇ) ಈ ಕಾರ್ಖಾನೆಗೆ ಹಂಚಿಕೆ ಮಾಡಲಾದ ಕಬ್ಬು ಮೀಸಲು ಪ್ರದೇಶದಲ್ಲಿನ ಪ್ರತಿ ಕಬ್ಬು ಬೆಳೆಗಾರ ಅಥವಾ ಪ್ರತಿ ಕಬ್ಬು ಬೆಳೆಗಾರರ ಸಹಕಾರಿ ಸಂಘದೊಂದಿಗೆ ಸರಬರಾಜು ಮಾಡುವ ಕಬ್ಬಿನ ಪ್ರಮಾಣದ ಕುರಿತು ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಒಪ್ಪಂದ ಮಾಡಿಕೊಳ್ಳುವುದು.

ಎಫ್) ಮೇಲ್ಕಂಡ ಕಬ್ಬು ಮೀಸಲು ಪ್ರದೇಶದಿಂದ ಮೇಲೆ ಹಂಚಿಕೆ ಮಾಡಲಾದ ಕಾರ್ಖಾನೆಗೆ ಹೊರತುಪಡಿಸಿ ಹೊರಗಿನ ಪ್ರದೇಶಕ್ಕೆ ಯಾವುದೇ ಕಾರಣಕ್ಕೂ ಜಿಲ್ಲಾಧಿಕಾರಿಗಳ ಆದೇಶವಿಲ್ಲದೆ ಕಬ್ಬು ಸಾಗಣೆ ಮಾಡತಕ್ಕದ್ದಲ್ಲ.

ಜಿ) ಯಾವುದೇ ಸಕ್ಕರೆ ಕಾರ್ಖಾನೆಯು ತನಗೆ ಹಂಚಿಕೆಯಾದ ಕಬ್ಬು ಮೀಸಲು ಪ್ರದೇಶವನ್ನು ಹೊರತುಪಡಿಸಿ, ಬೇರೆ ಪ್ರದೇಶಗಳಲ್ಲಿ ಬೆಳೆದಿರುವ ಕಬ್ಬನ್ನು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ಖರೀದಿಸಿದ್ದಲ್ಲಿ ಅಂತಹ ಕಾರ್ಖಾನೆಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಹೆಚ್) ಕಬ್ಬು ಸಾಗಣೆ ಮಾಡಲು ಪರವಾನಿಗೆ ಮಂಜೂರಾತಿ ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ರೂ.5/- ಶುಲ್ಕ ಮತ್ತು ರೂ.100/- ಭದ್ರತಾ ಠೇವಣಿ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು. ಒಪ್ಪಂದದ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಆ ಬಗ್ಗೆ ಜಿಲ್ಲಾಧಿಕಾರಿಯು ಸಂಬಂಧಪಟ್ಟವರಿಗೆ ಕಾರಣ ಕೇಳುವ ನೋಟಿಸು ಜಾರಿ ಮಾಡಿ ಹೇಳಿಕೆ ಪಡೆದು ಸೂಕ್ತವೆಂದು ಕಂಡುಬಂದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಸೂಕ್ತ ಆದೇಶ ಹೊರಡಿಸಬಹುದು.

ಐ) ಈ ಅಧಿಸೂಚನೆಯ ಮೂಲಕ ಹಂಚಿಕೆ ಮಾಡಲಾದ ಕಬ್ಬು ಮೀಸಲು ಕ್ಷೇತ್ರದಲ್ಲಿನ ಗ್ರಾಮಗಳ ಹಂಚಿಕೆಯು ಪೂರ್ಣವಾಗಿ ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆ. ಭವಿಷ್ಯದಲ್ಲಿ ನಿಗದಿತ ಅಂತರದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿತವಾದಲ್ಲಿ, ಈ ಅಧಿಸೂಚನೆಯ ಮೂಲಕ ಹಂಚಿಕೆ ಮಾಡಿದ ಗ್ರಾಮಗಳನ್ನು ಮರು ಹಂಚಿಕೆ ಮಾಡುವುದರ ಮೂಲಕ ಅಂತಹ ಹೊಸ ಸಕ್ಕರೆ ಕಾರ್ಖಾನೆಗೆ ಕಬ್ಬು ಮೀಸಲು ಕ್ಷೇತ್ರವನ್ನು ನಿಗದಿಪಡಿಸುವ ಉದ್ದೇಶಕ್ಕಾಗಿ ಈ ಅಧಿಸೂಚನೆಯನ್ನು ಪರಿಷ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿರುತ್ತದೆ.

ಈ ಅಧಿಸೂಚನೆಯನ್ನು ದಿನಾಂಕ:04.09.2025ರಂದು ಜರುಗಿದ ಸಚಿವ ಸಂಪುಟ ಸಭೆಯು ಪ್ರಕರಣ ಸಂಖ್ಯೆ; ಸಿ-708/2025 (ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ:42) ರಲ್ಲಿ ನೀಡಿದ ಅನುಮೋದನೆ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 183 ಎಸ್‌ಜಿಎಫ್ 2025, ದಿನಾಂಕ:15.09.2025ಕ್ಕೆ ಅನುಬಂಧ

ಮೆ.ಎಸ್.ಆರ್.ಕೆ ಶುಗರ್ಸ್ ಪ್ರೈ ಲಿ., ಸರ್ವೆ ನಂ.160, ಬೆಳಗಲ್ ಗ್ರಾಮ, ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ- ಈ ಕಾರ್ಖಾನೆಗೆ ಹಂಚಿಕೆ ಮಾಡಿದ ಗ್ರಾಮಗಳ ಪಟ್ಟಿ

ಕ್ರ. ಸಂ.	ಹಳ್ಳಿಗಳ ಹೆಸರು	ಕಾರ್ಖಾನೆಗಳಿಂದ ಇರುವ ಅಂತರ (ಕಿ.ಮೀ)	
		ಮೆ. ಎಸ್.ಆರ್.ಕೆ ಶುಗರ್ಸ್ ಲಿ., ಬೆಳಗಲ್ ಗ್ರಾಮ ದಿಂದ	ಮೆ. ಇ.ಐ.ಡಿ ಪ್ಯಾರಿ ಶುಗರ್ಸ್ ಲಿ., ನಾಯಿನೇಗಲಿ ಗ್ರಾಮದಿಂದ
1.	ಬಿಸನಾಳ	3	16
2.	ಧನ್ನೂರ	10	25
3.	ಇದ್ದಲಗಿ	5	19
4.	ಕಮದತ್ತ	8	23
5.	ಕಮಲದಿನ್ನಿ	25	35
6.	ಮರೋಳ	15	29
7.	ಚಿತ್ತರಗಿ	10	25
8.	ಗಂಜೀಹಾಳ	8	24
9.	ಕಜಗಲ್ಲ	8	16
10.	ಕೆಂಗಲ ಕಡಪಟ್ಟಿ	9	15
11.	ನಂದನೂರ	4	16
12.	ಹುನಗುಂದ	10	35
13.	ರಾಮವಾಡಗಿ	15	32
14.	ಅಮರವಾಡಗಿ	28	43
15.	ಹಿರೇಮಾಗಿ	25	50
16.	ಮಾದಾಪುರ	12	52
17.	ಬಿಸಲದಿನ್ನಿ	10	25
18.	ಚವಡಕಮಲದಿನ್ನಿ	10	12
19.	ಕಟಗೂರ	10	14
20.	ಜಾಲಕಮಲದಿನ್ನಿ	25	40
21.	ಹಾವರಗಿ	29	32
22.	ಹಿರೇಮಳಗಾವಿ	16	30
23.	ಸಂಗಮ	13	15
24.	ವರಗೊಡದಿನ್ನಿ	8	14
25.	ಬನ್ನಟ್ಟಿ	30	45
26.	ಚಿತ್ತವಾಡಗಿ	20	35
27.	ಹಿರೇಬಾಡವಾಡಗಿ	22	37
28.	ನಾಗೂರ	25	40
29.	ವಡಗೇರಿ	40	52
30.	ಯಡಹಳ್ಳಿ	26	42
31.	ಗೂಡೂರ ಎಸ್.ಬಿ	27	42
32.	ಹಿರೇ ಓತಗೇರಿ	30	45
33.	ಕಂದಗಲ್	42	67
34.	ತುಂಬ	27	42
35.	ಚಿನ್ನಾಪೂರ	28	43
36.	ಇಸ್ಲಾಂಪೂರ	29	45
37.	ಕರಡಿ	22	38
38.	ಮನ್ಮಥನಾಳ	20	36
39.	ಪೋಜಾಪೂರ	22	40
40.	ಬಸರಿಕಟ್ಟಿ	25	35
41.	ಬೂದಿಹಾಳ ಎಸ್.ಕೆ	26	44
42.	ಮೂಗನೂರ	22	48
43.	ಯರನಾಯಕನಾಳ	27	52

44.	ಇನಾಮ್ ಬೂದಿಹಾಳ್	18	46
45.	ಬೇನಾಳ	20	44
46.	ಬೂದಿಹಾಳ ಎಚ್. ಕೆ	22	48
47.	ಸುರಳಿಕಲ್	25	40
48.	ದಾಸಬಾಳ	20	28

ಕ್ರ.ಸಂ.	ಹಳ್ಳಿಗಳ ಹೆಸರು	**ಕಾರ್ಖಾನೆಗಳಿಂದ ಇರುವ ಅಂತರ (ಕಿ.ಮೀ)**	
		ಮೆ. ಎಸ್.ಆರ್.ಕೆ ಶುಗರ್ಸ್ ಲಿ., ಬೆಳಗಲ್ ಗ್ರಾಮ ದಿಂದ	ಮೆ.ಜೆಮ್ ಸಕ್ಕರೆ ಕಾರ್ಖಾನೆ ಲಿ., ಕುಂದರಗಿ ಗ್ರಾಮದಿಂದ
1.	ಬಸವನಾಳ	25	40
2.	ಚಿಕ್ಕಮಾಗಿ	20	35
3.	ಗಂಗೂರ	14	30
4.	ಹೊನ್ನರಹಳ್ಳಿ	30	42
5.	ಹುಲಗಿನಾಳ	12	28
6.	ಬೆಳಗಲ್	0	16
7.	ಹುಲ್ಲಹಳ್ಳಿ	25	70
8.	ಹೂವನೂರ	4	19
9.	ಇಂಗಳಗಿ	28	40
10.	ಖೈರವಾಡಗಿ	15	30
11.	ಕಿರಸೂರ	8	24
12.	ಕಲ್ಲಗೋನಾಳ	13	28
13.	ತಿಮ್ಮಾಪೂರ	10	80
14.	ಉಪನಾಳ ಎಸ್. ಕೆ	40	55
15.	ಪಾಪತನಾಳ	14	29
16.	ಚಿಕ್ಕಮಾಳಗಾವಿ	12	27
17.	ಅಂಬಲಿಕೊಪ್ಪ	25	40
18.	ಅಮೀನಗಡ	15	27
19.	ಬೆನಕನವಾರಿ	45	55
20.	ಬೇವಿನಮಟ್ಟಿ	30	45
21.	ಬಿಂಜವಾಡಗಿ	25	80
22.	ಚಿನ್ನಾಪೂರ ಎಸ್.ಕೆ	26	95
23.	ಗೋನಾಳ ಎಸ್.ಕೆ	52	94
24.	ಗೊರಬಾಳ	22	71
25.	ಹಿರೇಕೊಡಗಲಿ	27	73
26.	ಇಲಕಲ್ಲ	22	67
27.	ಇನಾಂ ಬೂದಿಹಾಳ	18	51
28.	ಕಡಿವಾಲ	35	75
29.	ಕುಣಿಬೆಂಚಿ	22	62
30.	ಮೇದಿನಾಪೂರ	3	18
31.	ನಂದವಾಡಗಿ	45	82
32.	ರಕ್ಕಸಗಿ	25	37
33.	ಸೂಳೇಬಾವಿ	25	40
34.	ನಿಂಬಲಗುಂದಿ	35	50

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

PR-265

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆ ಕುರಿತಂತೆ ಉಭಯ ಪಕ್ಷಕಾರರಾದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಗಳ ಪ್ರತಿನಿಧಿಗಳು ಸಹಿ ಮಾಡಿರುವ ಗುತ್ತಿಗೆ ಒಪ್ಪಂದ ಪತ್ರವನ್ನು ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲು ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:10.10.2024
2. ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ದಿನಾಂಕ:22.10.2024ರ ಪತ್ರ.
3. ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ:ಆರ್.ಎಸ್.ಎಸ್.ಕೆ/ಆಡಳಿತ/2024-25/415, ದಿನಾಂಕ:05.12.2024 & 04.01.2025.
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ;ಡಿಎಸ್‌ಕೆ/ಸಿಓಎಫ್/16/2023-24/1472, ದಿನಾಂಕ:24.12.2024
5. ಸರ್ಕಾರದ ಪತ್ರ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:03.02.2025
6. ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ:ಆರ್.ಎಸ್.ಎಸ್.ಕೆ/ಆಡಳಿತ/2024-25/415, ದಿನಾಂಕ:15.02.2025.
7. ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ದಿನಾಂಕ:25.03.2025ರ ಪತ್ರ
8. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಸಂಖ್ಯೆ;ಡಿಎಸ್‌ಕೆ/ಸಿಓಎಫ್/10/2024-25/2325, ದಿನಾಂಕ:26.03.2025
9. ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ದಿನಾಂಕ:22.07.2025ರ ಪತ್ರ
10. ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ: ಆರ್.ಎಸ್.ಎಸ್.ಕೆ/ಆಡಳಿತ/2025-26/53, ದಿನಾಂಕ:01.08.2025

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪೂರ ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಮೆ.ಬೀಳಗಿ ಶುಗರ್ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ರೂ.471.00 ಕೋಟಿಗಳ ಮೊತ್ತಕ್ಕೆ ಗುತ್ತಿಗೆ ನೀಡಲು ಅನುಮೋದನೆಯನ್ನು ನೀಡಲಾಗಿತ್ತು ಹಾಗೂ ಸದರಿ ಆದೇಶದ ಪರತ್ತು ಸಂಖ್ಯೆ (2) ರಲ್ಲಿ ಗುತ್ತಿಗೆ ಒಪ್ಪಂದ ಏರ್ಪಟ್ಟ 3 ತಿಂಗಳೊಳಗಾಗಿ ಗುತ್ತಿಗೆ ಕರಾರನ್ನು ಸಂಬಂಧಪಟ್ಟ ನೋಂದಣಿ ಪ್ರಾಧಿಕಾರದಲ್ಲಿ ನೋಂದಾಯಿಸತಕ್ಕದ್ದು ಎಂದು ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪೂರ ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯಲ್ಲಿ ಹಿಂದಿನ ಹಂಗಾಮಿನಲ್ಲಿ ಕಬ್ಬು ಅರೆಯುವ ಕಾರ್ಯವನ್ನು ನಡೆಸದೇ ಇರುವುದರಿಂದ ದುರಸ್ತಿ ಮತ್ತು ಕಬ್ಬು ಕಟಾವು ಮುಂಗಡವನ್ನು ಪಾವತಿಸಲು ಮತ್ತು ಮುಂಗಡ ಹಣ, ಭದ್ರತಾ ಠೇವಣಿ, ಇತರೆ ಪಾವತಿಗಳನ್ನು ಸೇರಿ ರೂ.75.00 ಕೋಟಿಗಳನ್ನು ಹೂಡಿಕೆ ಮಾಡಬೇಕಾಗಿರುವುದರಿಂದ ಗುತ್ತಿಗೆ ಒಪ್ಪಂದ ಪತ್ರವನ್ನು ನೋಂದಾಯಿಸಲು ನೋಂದಣಿ ಮತ್ತು ಮುದ್ರಾಂಕ ಶುಲ್ಕಕ್ಕೆ ವಿನಾಯಿತಿ/ರಿಯಾಯಿತಿಯನ್ನು ನೀಡಲು ಮತ್ತು ಗುತ್ತಿಗೆ ಅವಧಿಯನ್ನು ವಿಸ್ತರಣೆ ಮಾಡಲು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಕರಡು ಗುತ್ತಿಗೆ ಒಪ್ಪಂದ ಪತ್ರವನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದರು ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಪತ್ರದಲ್ಲಿ, ಕರಡು ಗುತ್ತಿಗೆ ಒಪ್ಪಂದ ಪತ್ರಕ್ಕೆ ಸರ್ಕಾರದ ಅನುಮೋದನೆಯನ್ನು ನೀಡಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿದ್ದರು. ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಪತ್ರದಲ್ಲಿ, ಕರಡು ಒಪ್ಪಂದ ಪತ್ರಕ್ಕೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ(6)ರ ಪತ್ರದಲ್ಲಿ, ಉಭಯ ಪಕ್ಷಕಾರರಾದ ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರುಗಳು ದಿನಾಂಕ:10.02.2025ರಂದು ಗುತ್ತಿಗೆ ಒಪ್ಪಂದಕ್ಕೆ ಸಹಿ ಮಾಡಿರುವ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ಪತ್ರದಲ್ಲಿ, ಗುತ್ತಿಗೆ ಒಪ್ಪಂದ ಪತ್ರವನ್ನು ನೋಂದಾಯಿಸಲು ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಕ್ಕೆ ವಿನಾಯಿತಿಯನ್ನು ನೀಡುವಂತೆ ಮತ್ತು ಗುತ್ತಿಗೆ ಒಪ್ಪಂದದ ಅವಧಿಯನ್ನು 2024-25 ರ ಬದಲು 2025-26 ರಿಂದ ಪ್ರಾರಂಭಿಸಿ 30 ವರ್ಷಗಳ ಅವಧಿಗೆ ಪರಿಗಣಿಸುವಂತೆ ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಕೋರಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ(8)ರ ಪತ್ರದಲ್ಲಿ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆ ಕೋರಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(9)ರ ಪತ್ರದಲ್ಲಿ, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಮನವಿಯನ್ನು ಹಿಂಪಡೆಯುತ್ತಿರುವುದಾಗಿ ಹಾಗೂ ಗುತ್ತಿಗೆ ಒಪ್ಪಂದ ಪತ್ರವನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ(10)ರ ಪತ್ರದಲ್ಲಿ ಗುತ್ತಿಗೆ ಒಪ್ಪಂದವನ್ನು ನೋಂದಣಿ ಮಾಡುವ ಅವಧಿಯನ್ನು ಮತ್ತೊಮ್ಮೆ 120 ದಿನಗಳಿಗೆ ವಿಸ್ತರಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ – ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಕೋರಿರುತ್ತಾರೆ.

ಮೇಲೆ ಪ್ರಸ್ತಾಪಿಸಿರುವ ಅಂಶಗಳ ಕುರಿತು ಪರಿಶೀಲಿಸಲಾಗಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯ ಕಬ್ಬು ಬೆಳೆಯುವ ರೈತರ ಮತ್ತು ಸದರಿ ಕಾರ್ಖಾನೆಯ ಕಾರ್ಮಿಕರ/ಷೇರುದಾರರ ಹಿತದೃಷ್ಟಿಯಿಂದ ಈ ಕಾರ್ಖಾನೆಯನ್ನು ಎಲ್.ಆರ್.ಓ.ಟಿ ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡಿರುವುದನ್ನು ಹಾಗೂ ಟೆಂಡರ್ ಡಾಕ್ಯೂಮೆಂಟಿನಲ್ಲಿರುವ ಪ್ರಮುಖ ಷರತ್ತುಗಳನ್ನು ಸಡಿಲಿಸಲು ನಿಯಮಗಳಲ್ಲಿ ಅವಕಾಶವಿಲ್ಲದಿರುವುದನ್ನು ಪರಿಗಣಿಸಿ, ಕಬ್ಬು ಬೆಳೆಗಾರರ ರೈತರ, ಕಾರ್ಖಾನೆಯ ಕಾರ್ಮಿಕರ ಹಿತದೃಷ್ಟಿಯ ಹಿನ್ನೆಲೆಯಲ್ಲಿ ಪ್ರಸ್ತುತ, ಉಭಯ ಪಕ್ಷಕಾರರಾದ ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಸಹಿ ಮಾಡಿರುವ ಗುತ್ತಿಗೆ ಒಪ್ಪಂದ ಪತ್ರವನ್ನು ನಿಯಮಾನುಸಾರ ನೋಂದಾಯಿಸಿಕೊಳ್ಳಲು ಕಾಲವಾಕಾಶದ ಅಗತ್ಯವಿರುವುದನ್ನು ಪರಿಗಣಿಸಿ, ಸದರಿ ಗುತ್ತಿಗೆ ಒಪ್ಪಂದ ಪತ್ರದ ನೋಂದಣಿಗೆ ಕಾಲಾವಧಿಯನ್ನು ವಿಸ್ತರಣೆ ಮಾಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020,</u>
<u>ಬೆಂಗಳೂರು, ದಿನಾಂಕ:15ನೇ ಸೆಪ್ಟೆಂಬರ್ 2025</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:10.10.2024ರಲ್ಲಿನ ಷರತ್ತು ಸಂಖ್ಯೆ: (2) ಅನ್ನು ಸಡಿಲಿಸಿ, ಉಭಯ ಪಕ್ಷಕಾರರಾದ ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮತ್ತು ಅಧ್ಯಕ್ಷರು, ಮೆ.ಬೀಳಗಿ ಶುಗರ್ಸ್ ಮಿಲ್ಸ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ದಿನಾಂಕ:10.02.2025ರಂದು ಸಹಿ ಮಾಡಿರುವ ಗುತ್ತಿಗೆ ಒಪ್ಪಂದ ಪತ್ರವನ್ನು ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸುವ ಅವಧಿಯನ್ನು ದಿನಾಂಕ:04.09.2025ರಿಂದ ಅನ್ವಯವಾಗುವಂತೆ 4 ತಿಂಗಳವರೆಗೆ ವಿಸ್ತರಿಸಿ ಆದೇಶಿಸಿದೆ.

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ:ಸಿಐ 214 ಸಿಓಎಫ್ 2020, ದಿನಾಂಕ:10.10.2024ರಲ್ಲಿನ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಈ ಆದೇಶವನ್ನು ದಿನಾಂಕ:04.09.2025ರಂದು ಜರುಗಿದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ; ಸಿ-709/2025 (ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ:43) ರಲ್ಲಿ ನೀಡಿದ ಅನುಮೋದನೆ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-266

ಕರ್ನಾಟಕ ಸರ್ಕಾರ

ಸಂ: ಸಿಐ 18 ಸಿಒಎಫ್ 2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಡಾ|| ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:20-09-2025

ಸೇರ್ಪಡೆ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಸಿಐ18ಸಿಒಎಫ್ 2022, ಬೆಂಗಳೂರು, ದಿನಾಂಕ:29.07.2025 ರಲ್ಲಿ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ 2018-19 ರಿಂದ 2022-23ನೇ ಸಾಲುಗಳಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ, ಸಕ್ಕರೆ ಮಾರಾಟ ಹಾಗೂ ಸಂಗ್ರಹ ಸಾಮಗ್ರಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಹಣ ದುರ್ಬಳಕೆ ಹಾಗೂ ಭ್ರಷ್ಟಾಚಾರಗಳ ಆಡಳಿತಾತ್ಮಕ ಮತ್ತು ಎಲ್ಲಾ ಕಾನೂನಾತ್ಮಕ ಅಂಶಗಳನ್ನು ಒಳಗೊಂಡಂತೆ, ನಿಯಮಬಾಹಿರ ಚಟುವಟಿಕೆಗಳು ಮತ್ತು ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಶ್ರೀ ಎಸ್.ಸಿ. ಇಂಗಳಗಿ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇತೃತ್ವದಲ್ಲಿ ಶ್ರೀ ಎಸ್.ಎಂ.ಕಲೂತಿ, ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ ಇವರನ್ನು ಒಳಗೊಂಡ ಜಂಟಿ ತನಿಖೆ ನಡೆಸಲು ನೇಮಿಸಿ ಆದೇಶಿಸಲಾಗಿತ್ತು.

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ದಿನಾಂಕ:02.09.2025ರ ಪತ್ರದಲ್ಲಿ, ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ ಹುಬ್ಬಳ್ಳಿ ಕಿತ್ತೂರು ತಾಲ್ಲೂಕು ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯ ಪ್ರಸ್ತುತವಿರುವ ಆಡಳಿತ ಮಂಡಳಿಯು 2023-24 ಮತ್ತು 2024-25 ನೇ ಹಂಗಾಮುಗಳಲ್ಲಿ ಕಬ್ಬು ಅರೆಯುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಿರುತ್ತದೆ. ಈ ಅವಧಿಯಲ್ಲಿ ಪ್ರತ್ಯೇಕ ಖಾತೆಗಳ ನಿರ್ವಹಣೆ, ಹಣ ವರ್ಗಾವಣೆ, ನಿರ್ದೇಶಕರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳೇ ಅವರ ಪತ್ನಿಯ ಹೆಸರಲ್ಲಿ "ಬೆಳಕು" ಎಂಬ ಸಹಕಾರ ಸಂಘವನ್ನು ಸ್ಥಾಪನೆ ಮಾಡಿ ಕಾರ್ಖಾನೆಯ ಸಂಪೂರ್ಣ ಹಣ ವರ್ಗಾಯಿಸಿ ಬಡ್ಡಿಯನ್ನು ಪಡೆದು ವಂಚಿಸಿರುವುದು ಮತ್ತು ಅವ್ಯವಹಾರಗಳನ್ನು ಮಾಡಿ ಕಾರ್ಖಾನೆಗೆ ನಷ್ಟ ಉಂಟು ಮಾಡಿರುವುದು ಮತ್ತು ಸಕ್ಕರೆ ಹಾಗೂ ಅದರ ಉತ್ಪನ್ನಗಳ ಮಾರಾಟದಲ್ಲಿ ಅಕ್ರಮಗಳನ್ನು ಎಸಗಿರುವ ಆರೋಪಗಳ ಕುರಿತಂತೆ ತನಿಖೆಗೆ ಒಳಪಡಿಸುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ ಹುಬ್ಬಳ್ಳಿ ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ 2023-24 ಮತ್ತು 2024-25 ನೇ ಹಂಗಾಮುಗಳಲ್ಲಿ ಕಬ್ಬು ಅರೆಯುವ

ಕಾರ್ಯಚಟುವಟಿಕೆಗಳನ್ನು ನಿರ್ವಹಿಸಿರುವುದರಿಂದ, ಈ ಅವಧಿಯಲ್ಲಿ ಪ್ರತ್ಯೇಕ ಖಾತೆಗಳ ನಿರ್ವಹಣೆ, ಹಣ ವರ್ಗಾವಣೆ ಮಾಡಿರುವ ಬಗ್ಗೆ ನಿರ್ದೇಶಕರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳೇ ಅವರ ಪತ್ನಿಯ ಹೆಸರಲ್ಲಿ "ಬೆಳಕು" ಎಂಬ ಸಹಕಾರ ಸಂಘವನ್ನು ಸ್ಥಾಪನೆ ಮಾಡಿ ಕಾರ್ಖಾನೆಯ ಸಂಪೂರ್ಣ ಹಣ ವರ್ಗಾಯಿಸಿ ಬಡ್ಡಿಯನ್ನು ಪಡೆದು ವಂಚಿಸಿರುವುದಾಗಿ ಮತ್ತು ಅವ್ಯವಹಾರಗಳನ್ನು ಮಾಡಿ ಕಾರ್ಖಾನೆಗೆ ನಷ್ಟ ಉಂಟುಮಾಡಿರುವುದಾಗಿ, ಸಕ್ಕರೆ ಮತ್ತು ಅದರ ಉತ್ಪನ್ನಗಳ ಮಾರಾಟದಲ್ಲಿ ಅಕ್ರಮಗಳನ್ನು ಎಸಗಿರುವುದಾಗಿ ಹಾಗೂ ಇನ್ನಿತರೆ ಆರೋಪಗಳ ಕುರಿತಂತೆ ಸಹ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸುವಂತೆ ಇದೇ ಸಮಸಂಖ್ಯೆಯ ಸರ್ಕಾರದ ದಿನಾಂಕ: 29.07.2025 ರ ಆದೇಶದಲ್ಲಿನ ಆದೇಶ ಭಾಗದ ಮೊದಲನೇ ಕಂಡಿಕೆಯ ನಂತರ ಸೇರ್ಪಡೆಗೊಳಿಸಿ ಆದೇಶಿಸಿದೆ.

ಮುಂದುವರೆದು, ಸರ್ಕಾರದ ದಿನಾಂಕ:29.07.2025 ರ ಆದೇಶದಲ್ಲಿ ಇತರೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-267

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 234 ಎಸ್‌ಜಿಎಫ್ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ:18.10.2025

ತಿದ್ದುಪಡಿ ಆದೇಶ

****

ಸರ್ಕಾರದ ಆದೇಶ ಸಂಖ್ಯೆ:ಸಿಐ 234 ಎಸ್‌ಜಿಎಫ್ 2025, ದಿನಾಂಕ: 06.08.2025ರಲ್ಲಿ ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರಕನ್ನಡ, ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2025-26ನೇ ಹಂಗಾಮಿನ ಕಬ್ಬು ನುರಿಸುವ ಕಾರ್ಯವನ್ನು ಕಡ್ಡಾಯವಾಗಿ ದಿನಾಂಕ:01.11.2025 ರಿಂದ ಪ್ರಾರಂಭಿಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ಕಬ್ಬು ನುರಿಸುವ ಕಾರ್ಯವನ್ನು ನಿಗದಿಪಡಿಸಿರುವ ದಿನಾಂಕ:01.11.2025 ಎಂಬುದರ ಬದಲು **20.10.2025** ಎಂದು ತಿದ್ದಿ ಓದಿ ಕೊಳ್ಳತಕ್ಕದ್ದು.

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ: ಸಿಐ 234 ಎಸ್‌ಜಿಎಫ್ 2025, ದಿನಾಂಕ: 06.08.2025ರಲ್ಲಿ ಇತರೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-268

ಕರ್ನಾಟಕ ಸರ್ಕಾರ

ಸಂಖ್ಯೆ: ಸಕ ಇ 8 ಎಸ್‌ಎಲ್ ಪಿ (ಭಾ-1) 2025

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ: -09-2025

ಸುತ್ತೋಲೆ

ವಿಷಯ: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಆದೇಶವಾಗಿರುವ ಹಿನ್ನೆಲೆಯಲ್ಲಿ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಮತ್ತು ಇತರೆ ಸಮುದಾಯಗಳಿಗೆ ಜಾತಿ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024, ದಿನಾಂಕ: 25-08-2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ 101 ಜಾತಿಗಳನ್ನು ಒಳ ಮೀಸಲಾತಿಗಾಗಿ ಸಂವಿಧಾನದ ಅನುಚ್ಛೇಧ 15 ಮತ್ತು ಅನುಚ್ಛೇಧ 16 ರನ್ವಯ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಲು ಪ್ರವರ್ಗ- ಎ ರಲ್ಲಿ 16 ಜಾತಿಗಳು ಪ್ರವರ್ಗ-ಬಿ ರಲ್ಲಿ 19 ಜಾತಿಗಳು ಮತ್ತು ಪ್ರವರ್ಗ-ಸಿ ರಲ್ಲಿ 63 ಜಾತಿಗಳನ್ನು ಸೇರಿಸಿ, ಮೂರು ಪ್ರವರ್ಗಗಳಾಗಿ ವರ್ಗೀಕರಿಸಿ, ಆದೇಶ ಹೊರಡಿಸಲಾಗಿದೆ. ಮುಂದುವರೆದು, ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯಗಳನ್ನು ಪ್ರವರ್ಗ- ಎ ಮತ್ತು ಪ್ರವರ್ಗ – ಬಿ ನಲ್ಲಿ ಮೀಸಲಾತಿ ಸೌಲಭ್ಯವನ್ನು ಪಡೆಯಬಹುದೆಂದು ಆದೇಶಿಸಲಾಗಿದೆ.

ಮೇಲ್ಕಂಡ ಆದೇಶವನ್ನು ಅನುಷ್ಠಾನಗೊಳಿಸಲು ಕೆಲವೊಂದು ಸ್ಪಷ್ಟೀಕರಣ ನೀಡುವುದು ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಪಡೆಯುವ ಬಗ್ಗೆ ಈ ಕೆಳಕಂಡಂತೆ ವಿವರಿಸಲಾಗಿದೆ.

A) ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಈಗಾಗಲೇ ಪಡೆದಿದ್ದಲ್ಲಿ ಅನುಸರಿಸಬೇಕಾದ ವಿಧಾನ:

1) ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯಗಳನ್ನು ಹೊರತುಪಡಿಸಿ ಉಳಿದ 98 ಜಾತಿಗಳನ್ನು ಪ್ರವರ್ಗ- ಎ, ಪ್ರವರ್ಗ-ಬಿ ಮತ್ತು ಪ್ರವರ್ಗ –ಸಿ ಗಳಲ್ಲಿ ವರ್ಗೀಕರಿಸಲಾಗಿದೆ. ಆದರೆ, ಸದರಿ 98 ಸಮುದಾಯದವರು ಈಗಾಗಲೇ ಜಾತಿ ಪ್ರಮಾಣ ಪತ್ರಗಳನ್ನು ಪಡೆದಿರುತ್ತಾರೆ. ಈ 98 ಜಾತಿಗಳು ತಮ್ಮ ಜಾತಿಯನ್ನು ಸ್ಪಷ್ಟವಾಗಿ ತಿಳಿಸಿ, ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿರುವುದರಿಂದ ಅದೇ ಜಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರವರ್ಗದೊಂದಿಗೆ ಮೀಸಲಾತಿ ಸೌಲಭ್ಯ ಪಡೆಯಲು ಉಪಯೋಗಿಸಬಹುದಾಗಿದೆ. ಆದ್ದರಿಂದ ಸಂಬಂಧಪಟ್ಟ ಪ್ರಾಧಿಕಾರಿಗಳು ಈ ಜಾತಿ ಪ್ರಮಾಣ ಪತ್ರಗಳಿಗೆ ಉಲ್ಲೇಖ(1) ರ ಆದೇಶದಲ್ಲಿ ವರ್ಗೀಕರಿಸಿರುವಂತೆ ಆಯಾ ಜಾತಿಗಳಿಗೆ ಸಂಬಂಧಿಸಿದ ಪ್ರವರ್ಗವನ್ನು ಅಟಲ್ ಜೀ ಜನಸ್ನೇಹಿ ಕೇಂದ್ರದ ತಂತ್ರಾಂಶದಲ್ಲಿ ಅಳವಡಿಸಿಕೊಂಡು ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸುವ ಬಗ್ಗೆ ಅಗತ್ಯ ಕ್ರಮವಹಿಸುವುದು.

ಉದಾಹರಣೆ i) : ಅಭ್ಯರ್ಥಿಯು ಕೊರಚ (Koracha) ಎಂದು ಜಾತಿ ಪ್ರಮಾಣ ಪತ್ರ ಈಗಾಗಲೇ ಪಡೆದಿದ್ದು.ಅಟಲ್ ಜೀ ಜನಸ್ನೇಹಿ ಕೇಂದ್ರದವರು ಉಲ್ಲೇಖ(1)ರಲ್ಲಿನ ಆದೇಶದಂತೆ ಕೊರಚ ಸಮುದಾಯವನ್ನು ಪ್ರವರ್ಗ–ಸಿ ಯಲ್ಲಿ ವರ್ಗೀಕರಿಸಿರುವುದರಿಂದ ಜಾತಿ ಪ್ರಮಾಣ ಪತ್ರವನ್ನು **ಕೊರಚ (ಪ್ರವರ್ಗ-ಸಿ)** ಎಂದು ನೀಡಲು ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

ಉದಾಹರಣೆ ii) : ಅಭ್ಯರ್ಥಿಯು ಪರೆಯನ್, ಪರೆಯ ಎಂದು ಜಾತಿ ಪ್ರಮಾಣ ಪತ್ರ ಈಗಾಗಲೇ ಪಡೆದಿದ್ದು.ಅಟಲ್ ಜೀ ಜನಸ್ನೇಹಿ ಕೇಂದ್ರದವರು ಉಲ್ಲೇಖ(1)ರಲ್ಲಿನ ಆದೇಶದಂತೆ ಪರೆಯನ್, ಪರೆಯ ಸಮುದಾಯವನ್ನು ಪ್ರವರ್ಗ– ಬಿ ಯಲ್ಲಿ ವರ್ಗೀಕರಿಸಿರುವುದರಿಂದ ಜಾತಿ ಪ್ರಮಾಣ ಪತ್ರವನ್ನು **ಪರೆಯನ್, ಪರೆಯ (ಪ್ರವರ್ಗ-ಸಿ)** ಎಂದು ನೀಡಲು ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

2) ಈಗಾಗಲೇ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದವರು, ಸಂಬಂಧಿಸಿದ ಪ್ರವರ್ಗ ಎ ಅಥವಾ ಪ್ರವರ್ಗ-ಬಿ ರಲ್ಲಿ ಮೀಸಲಾತಿ ಸೌಲಭ್ಯ ಪಡೆಯಬೇಕಾದಲ್ಲಿ ತಮ್ಮ ಮೂಲ ಜಾತಿ ಹಾಗೂ ಪ್ರವರ್ಗವನ್ನು ಉಲ್ಲೇಖ(1)ರ ಆದೇಶದಂತೆ ಸ್ಪಷ್ಟವಾಗಿ ನಮೂದಿಸಿ, **ಅರ್ಜಿ ನಮೂನೆ -1** ರಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪದ್ಧತಿಯಂತೆ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವುದು.

3) ಅರ್ಜಿ ಸ್ವೀಕರಿಸಿದ ಪ್ರಾಧಿಕಾರಗಳು ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮುಂತಾದುವುಗಳ ಮೀಸಲಾತಿ) ಅಧಿನಿಯಮ 1990 ತಿದ್ದುಪಡಿ ಅಧಿನಿಯಮ 2024 ಮತ್ತು ನಿಯಮಗಳು 1992, ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 41 ಎಸ್ಎಡಿ 2022, ದಿನಾಂಕ: 02-07-2022ರನ್ವಯ ಪರಿಶೀಲಿಸಿ, ಅಭ್ಯರ್ಥಿಗಳ ಮೂಲ ಜಾತಿಯ ಬಗ್ಗೆ ಸ್ಥಳೀಯ ವಿಚಾರಣೆ ನಡೆಸಿ, ಮೂಲ ಜಾತಿಯನ್ನು ಖಾತರಿಪಡಿಸಿಕೊಂಡು ಉಲ್ಲೇಖ(1)ರಲ್ಲಿ ವರ್ಗೀಕರಿಸಿರುವಂತೆ ಮೂಲ ಜಾತಿಯೊಂದಿಗೆ ಪ್ರವರ್ಗವನ್ನು ನಮೂದಿಸಿ, ಜಾತಿ ಪ್ರಮಾಣ ಪತ್ರವನ್ನು ನೀಡುವುದು.

ಉದಾಹರಣೆ: i) ಅಭ್ಯರ್ಥಿಯು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದು ಹಾಗೂ ಮೂಲ ಜಾತಿಯು **ಹೊಲೆಯ** ಎಂದು ಇದ್ದಲ್ಲಿ ಜಾತಿ ಪ್ರಮಾಣ ಪತ್ರದಲ್ಲಿ **ಆದಿ ಕರ್ನಾಟಕ (ಹೊಲೆಯ/ಪ್ರವರ್ಗ-ಬಿ)** ಎಂದು ನಮೂದಿಸಿ, ಜಾತಿ ಪ್ರಮಾಣ ಪತ್ರ ನೀಡುವುದು.

ii) ಅಭ್ಯರ್ಥಿಯು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದು ಹಾಗೂ ಮೂಲ ಜಾತಿಯು **ಮಾದಿಗ** ಎಂದು ಇದ್ದಲ್ಲಿ ಜಾತಿ ಪ್ರಮಾಣ ಪತ್ರದಲ್ಲಿ **ಆದಿ ಕರ್ನಾಟಕ (ಮಾದಿಗ/ಪ್ರವರ್ಗ- ಎ)** ಎಂದು ನಮೂದಿಸಿ, ಜಾತಿ ಪ್ರಮಾಣ ಪತ್ರ ನೀಡುವುದು.

ಉದಾಹರಣೆ (1) ಮತ್ತು (2) ರಂತೆ ಆದಿ ದ್ರಾವಿಡ ಮತ್ತು ಅದಿ ಆಂಧ್ರ ಅಭ್ಯರ್ಥಿಗಳು ಇದೇ ರೀತಿ ಜಾತಿ ಪ್ರಮಾಣ ಪತ್ರ ನೀಡಲು ಕ್ರಮವಹಿಸುವುದು.

ಸದರಿ ಪ್ರಕ್ರಿಯೆಯು ಆದಿ ದ್ರಾವಿಡ, ಆದಿ ಆಂಧ್ರ ಮತ್ತು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದವರಿಗೆ ಮಾತ್ರ ಅನ್ವಯಿಸುತ್ತದೆ.

4) ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ್ಕೆ ಸೇರಿದ ಇತರೆ (*ಮೂಲ ಜಾತಿಯನ್ನು ತಿಳಿಸದೇ ಇರುವ)* ಅಭ್ಯರ್ಥಿಗಳು, ಉಲ್ಲೇಖ(1)ರ ಆದೇಶದಂತೆ, ಪ್ರವರ್ಗ- ಎ ಅಥವಾ ಪ್ರವರ್ಗ- ಬಿ ಯನ್ನು ಆಯ್ಕೆ ಮಾಡಿಕೊಂಡು ಸ್ಪಷ್ಟವಾಗಿ ನಮೂದಿಸಿ, ಮುಚ್ಚಳಿಕೆ ಪತ್ರ (Affidavit) ದೊಂದಿಗೆ ಅರ್ಜಿ ಸಲ್ಲಿಸುವುದು.

5) ಅರ್ಜಿ ಸ್ವೀಕರಿಸಿದ ಪ್ರಾಧಿಕಾರಗಳು ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮುಂತಾದುವುಗಳ ಮೀಸಲಾತಿ) ಅಧಿನಿಯಮ 1990 ತಿದ್ದುಪಡಿ ಅಧಿನಿಯಮ 2024 ಮತ್ತು ನಿಯಮಗಳು 1992, ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 41 ಎಸ್ಎಡಿ 2022, ದಿನಾಂಕ: 02-07-2022ರನ್ವಯ ಪರಿಶೀಲಿಸಿ, ಅಭ್ಯರ್ಥಿಗಳೂ ಪರಿಶಿಷ್ಟ ಜಾತಿಗೆ ಸೇರಿರುವ ಬಗ್ಗೆ ಖಾತರಿಪಡಿಸಿಕೊಂಡು ಮೇಲ್ಕಂಡ ಕ್ರಮಸಂಖ್ಯೆ (4)ರಂತೆ, ನೀಡಿರುವ ಮುಚ್ಚಳಿಕೆ ಪತ್ರ (Affidavit)ನಲ್ಲಿ ಘೋಷಿಸಿರುವ ಪ್ರವರ್ಗವನ್ನು ನಮೂದಿಸಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ನೀಡುವುದು.

ಉದಾಹರಣೆ: 1) ಅಭ್ಯರ್ಥಿಯು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದು ಅರ್ಜಿಯಲ್ಲಿ ಮೂಲ ಜಾತಿಯನ್ನು ತಿಳಿಸದೇ ಇದ್ದಲ್ಲಿ ಜಾತಿ ಪ್ರಮಾಣ ಪತ್ರದಲ್ಲಿ **ಆದಿ ಕರ್ನಾಟಕ (ಪ್ರವರ್ಗ-ಎ ಆಥವಾ ಪ್ರವರ್ಗ-ಬಿ)-[*ಅಭ್ಯರ್ಥಿಯು Affidavit ನಲ್ಲಿ ಘೋಷಿಸಿರುವಂತೆ]*** ನಮೂದಿಸಿ, ಜಾತಿ ಪ್ರಮಾಣ ಪತ್ರ ನೀಡುವುದು.

ಆದಿ ದ್ರಾವಿಡ ಮತ್ತು ಅದಿ ಆಂಧ್ರ ಅಭ್ಯರ್ಥಿಗಳು ಇದೇ ರೀತಿ ಜಾತಿ ಪ್ರಮಾಣ ಪತ್ರ ನೀಡಲು ಕ್ರಮವಹಿಸುವುದು. ಸದರಿ ಪ್ರಕ್ರಿಯೆಯು ಆದಿ ದ್ರಾವಿಡ, ಆದಿ ಆಂಧ್ರ ಮತ್ತು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದು ಮೂಲಜಾತಿಯನ್ನು ಅರ್ಜಿಯಲ್ಲಿ ತಿಳಿಸದೇ ಇರುವ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

6) ಅಭ್ಯರ್ಥಿಗಳು ಮೇಲಿನ ಕ್ರಮಸಂಖ್ಯೆ (4) ರಂತೆ ಆಯ್ಕೆ ಮಾಡಿಕೊಂಡು ಯಾವ ಪ್ರವರ್ಗದಲ್ಲಿ ಜಾತಿ ಪ್ರಮಾಣ ಪತ್ರ ಪಡೆದಿರುತ್ತಾರೆಯೋ ಅದೇ ಪ್ರವರ್ಗ ಅವರ ಕುಟುಂಬಕ್ಕೆ ಶಾಶ್ವತವಾಗಿ ಮುಂದುವರೆಯುತ್ತದೆ. ಯಾವುದೇ ಕಾರಣಕ್ಕೂ ಬದಲಾವಣೆಗೆ ಅವಕಾಶವಿರುವುದಿಲ್ಲ.

B) ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯದೇ ಇದ್ದಲ್ಲಿ ಹೊಸದಾಗಿ ಪಡೆಯಲು ಅನುಸರಿಸಬೇಕಾದ ವಿಧಾನ:

1) ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜಾತಿಗಳನ್ನು ಹೊರತುಪಡಿಸಿ, ಉಳಿದ 98 ಜಾತಿಗಳನ್ನು ನಮೂದಿಸಿ, ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಅರ್ಜಿ ಸ್ವೀಕರಿಸಿದ ಪ್ರಾಧಿಕಾರಗಳು ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮುಂತಾದುವುಗಳ ಮೀಸಲಾತಿ) ಅಧಿನಿಯಮ 1990 ತಿದ್ದುಪಡಿ ಅಧಿನಿಯಮ 2024 ಮತ್ತು ನಿಯಮಗಳು 1992, ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 41 ಎಸ್ಎಡಿ 2022, ದಿನಾಂಕ: 02-07-2022ರನ್ವಯ ಪರಿಶೀಲಿಸಿ, ಸಂಬಂಧಪಟ್ಟ ಪ್ರಾಧಿಕಾರಗಳು, ಅಭ್ಯರ್ಥಿಗಳ ಜಾತಿಯ ಬಗ್ಗೆ ಸ್ಥಳೀಯ ವಿಚಾರಣೆ ನಡೆಸಿ, ಜಾತಿಯನ್ನು ಖಾತರಿಪಡಿಸಿಕೊಂಡು

ತಮ್ಮ ತಂದೆ-ತಾಯಿ/ಪಾಲಕರು ಜಾತಿ ಪ್ರಮಾಣ ಪತ್ರದಲ್ಲಿ ಅದೇ 98 ಜಾತಿಗಳಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಉಲ್ಲೇಖ(1)ರಲ್ಲಿ ವರ್ಗೀಕರಿಸಿರುವಂತೆ ಜಾತಿಯೊಂದಿಗೆ ಪ್ರವರ್ಗವನ್ನು ನಮೂದಿಸಿ, ಜಾತಿ ಪ್ರಮಾಣ ಪತ್ರವನ್ನು ನೀಡುವುದು.

ಉದಾಹರಣೆ: ಅಭ್ಯರ್ಥಿಯು ಮಾದಿಗ ಜಾತಿಗೆ ಸೇರಿರುವ ಬಗ್ಗೆ ಅರ್ಜಿ ಸಲ್ಲಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರವು ಮೇಲಿನ ಕಾಯ್ದೆಯಂತೆ ಪರಿಶೀಲಿಸಿ, ಜಾತಿ ಪ್ರಮಾಣ ಪತ್ರದಲ್ಲಿ **ಮಾದಿಗ (ಪ್ರವರ್ಗ-ಎ)** ಎಂದು ಜಾತಿ ಪ್ರಮಾಣ ಪತ್ರ ನೀಡುವುದು.

2) ಅಭ್ಯರ್ಥಿಯ ತಮ್ಮ ಮೂಲ ಜಾತಿಯನ್ನು ಘೋಷಿಸಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ, ಅಭ್ಯರ್ಥಿಯ ತಂದೆ-ತಾಯಿ/ಪಾಲಕರ ದಾಖಲೆಗಳಲ್ಲಿ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜಾತಿಯೆಂದು ನಮೂದಾಗಿರುವಂತಹ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರವು ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮುಂತಾದುವುಗಳ ಮೀಸಲಾತಿ) ಅಧಿನಿಯಮ 1990 ತಿದ್ದುಪಡಿ ಅಧಿನಿಯಮ 2024 ಮತ್ತು ನಿಯಮಗಳು 1992, ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 41 ಎಸ್‌ಎಡಿ 2022, ದಿನಾಂಕ: 02-07-2022ರನ್ವಯ ಪರಿಶೀಲಿಸಿ, ಸಂಬಂಧಪಟ್ಟ ಪ್ರಾಧಿಕಾರಗಳು, ಅಭ್ಯರ್ಥಿಗಳ ಜಾತಿಯ ಬಗ್ಗೆ ಸ್ಥಳೀಯ ವಿಚಾರಣೆ ನಡೆಸಿ, ಜಾತಿಯನ್ನು ಖಾತರಿಪಡಿಸಿಕೊಂಡು ಉಲ್ಲೇಖ(1)ರಲ್ಲಿ ವರ್ಗೀಕರಿಸಿರುವಂತೆ ಜಾತಿಯೊಂದಿಗೆ ಪ್ರವರ್ಗವನ್ನು ನಮೂದಿಸಿ, ಜಾತಿ ಪ್ರಮಾಣ ಪತ್ರವನ್ನು ನೀಡುವುದು.

ಉದಾಹರಣೆ: ಅಭ್ಯರ್ಥಿಯ ತಂದೆ-ತಾಯಿ/ಪಾಲಕರ ದಾಖಲೆಗಳಲ್ಲಿ ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದು, ಅರ್ಜಿದಾರರು ತಮ್ಮ ಮೂಲ ಜಾತಿಯು **ಹೊಲೆಯ** ಎಂದು ಅರ್ಜಿ ಸಲ್ಲಿಸಿದ್ದಲ್ಲಿ ಜಾತಿ ಪ್ರಮಾಣ ಪತ್ರದಲ್ಲಿ **ಆದಿ ಕರ್ನಾಟಕ (ಹೊಲೆಯ/ಪ್ರವರ್ಗ-ಬಿ)** ಎಂದು ನಮೂದಿಸಿ, ಜಾತಿ ಪ್ರಮಾಣ ಪತ್ರ ನೀಡುವುದು.

3) ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ್ಕೆ ಸೇರಿದ ಇತರೆ ಅಭ್ಯರ್ಥಿಗಳು (*ಮೂಲ ಜಾತಿಯನ್ನು ತಿಳಿಸದೇ ಇರುವ)* ಉಲ್ಲೇಖ(1)ರ ಆದೇಶದಂತೆ, ಪ್ರವರ್ಗ- ಎ ಅಥವಾ ಪ್ರವರ್ಗ-ಬಿ ಯನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಪ್ರವರ್ಗವನ್ನು ಸ್ಪಷ್ಟವಾಗಿ ನಮೂದಿಸಿ, ಮುಚ್ಚಳಿಕೆ ಪತ್ರ (Affidavit) ದೊಂದಿಗೆ ಹೊಸದಾಗಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರವು ಅರ್ಜಿಯನ್ನು ಪರಿಶೀಲಿಸಿ, ತಮ್ಮ ತಂದೆ-ತಾಯಿ/ಪಾಲಕರ ದಾಖಲೆಗಳಲ್ಲಿ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಮೇಲ್ಕಂಡ ಕ್ರಮಸಂಖ್ಯೆ (A-5) ರಂತೆ ಹೊಸ ಜಾತಿ ಪ್ರಮಾಣ ಪತ್ರ ನೀಡುವ ಬಗ್ಗೆ ಅರ್ಜಿಗಳನ್ನು ಪರಿಶೀಲಿಸಿ, ಕ್ರಮವಹಿಸುವುದು.

ಉದಾಹರಣೆ: ಅಭ್ಯರ್ಥಿಯು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆಯಲು ಹೊಸದಾಗಿ ಅರ್ಜಿ ಸಲ್ಲಿಸಿ, ಮೂಲ ಜಾತಿಯನ್ನು ತಿಳಿಸದೇ ಇದ್ದಲ್ಲಿ ಹಾಗೂ ತಮ್ಮ ತಂದೆ-ತಾಯಿ/ಪಾಲಕರ ದಾಖಲೆಗಳಲ್ಲಿ ಆದಿ ಕರ್ನಾಟಕ ಜಾತಿ ಪ್ರಮಾಣ ಪತ್ರ ಪಡೆದಿದ್ದು, ಜಾತಿ ಪ್ರಮಾಣ ಪತ್ರದಲ್ಲಿ **ಆದಿ**

ಕರ್ನಾಟಕ (ಪ್ರವರ್ಗ-ಎ ಆಥವಾ ಪ್ರವರ್ಗ-ಬಿ)-[*ಅಭ್ಯರ್ಥಿಯು Affidavit ನಲ್ಲಿ ಘೋಷಿಸಿರುವಂತೆ]* ನಮೂದಿಸಿ, ಜಾತಿ ಪ್ರಮಾಣ ಪತ್ರವನ್ನು ನೀಡುವುದು.

ಅಭ್ಯರ್ಥಿಗಳು ಮೇಲ್ಕಂಡ ಕ್ರಮಸಂಖ್ಯೆ (3) ರಂತೆ ಆಯ್ಕೆ ಮಾಡಿಕೊಂಡು ಯಾವ ಪ್ರವರ್ಗದಲ್ಲಿ ಜಾತಿ ಪ್ರಮಾಣ ಪತ್ರ ಪಡೆದಿರುತ್ತಾರೆಯೋ ಅದೇ ಪ್ರವರ್ಗ ಅವರ ಕುಟುಂಬಕ್ಕೆ ಶಾಶ್ವತವಾಗಿ ಮುಂದುವರೆಯುತ್ತದೆ. ಯಾವುದೇ ಕಾರಣಕ್ಕೂ ಬದಲಾವಣೆಗೆ ಅವಕಾಶವಿರುವುದಿಲ್ಲ.

ಆದಿ ದ್ರಾವಿಡ, ಆದಿ ಆಂಧ್ರ ಮತ್ತು ಆದಿ ಕರ್ನಾಟಕ ಈ ಮೂರು ಜಾತಿಗಳಿಗೆ ಮೂಲ ಜಾತಿಯನ್ನು ಸಂಬಂಧಪಟ್ಟ ಪ್ರವರ್ಗಗಳೊಂದಿಗೆ ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸುವುದು. ಆದರೆ, ಭಾರತ ಸರ್ಕಾರವು ಅಧಿಸೂಚಿಸಿರುವ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇಲ್ಲದೇ ಇರುವ ಯಾವುದೇ ಜಾತಿಗಳನ್ನು ಮೂಲ ಜಾತಿಯೆಂದು ನಮೂದಿಸತಕ್ಕದ್ದಲ್ಲ.

(ಎಸ್.ವಿ. ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

ನಮೂನೆ -1

ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯದವರು ಜಾತಿ ಪ್ರಮಾಣ ಪತ್ರ ಪಡೆಯಲು ಸಲ್ಲಿಸಬೇಕಾದ ಅರ್ಜಿ

ಕ್ರ. ಸಂ.	**ಅರ್ಜಿದಾರರ ವಿವರ**	
1	ಹೆಸರು	
2	ವಿಳಾಸ	
2	ತಂದೆ-ತಾಯಿ/ಪಾಲಕರ ಹೆಸರು	
3	ಜಾತಿ/ಮೂಲ ಜಾತಿ	
4	ಮೂಲ ಜಾತಿ ಗೊತ್ತಿಲ್ಲದೇ ಇದ್ದಲ್ಲಿ ಆಯ್ಕೆ ಮಾಡಿಕೊಳ್ಳುವ ಪ್ರವರ್ಗವನ್ನು (ಸರ್ಕಾರದ ಆದೇಶ ಸಂಖ್ಯೆ: ಸ ಕ ಇ 8 ಎಸ್ಎಲ್‌ಪಿ 2024, ದಿನಾಂಕ:25-08-2025 ರನ್ವಯ) **(ಸ್ಪಷ್ಟವಾಗಿ ನಮೂದಿಸುವುದು ಹಾಗೂ ಈ ಅರ್ಜಿಯೊಂದಿಗೆ ಮುಚ್ಚಳಿಕೆ ಪತ್ರ/Affidavit ನೀಡುವುದು)**	
5	ಆಧಾರ್ ಸಂಖ್ಯೆ	
6	ಪಡಿತರ ಚೀಟಿ ಲಭ್ಯವಿದ್ದಲ್ಲಿ ಸಂಖ್ಯೆ	
7	ಮೊಬೈಲ್ ಸಂಖ್ಯೆ	

ಅರ್ಜಿದಾರರ ಸಹಿ

ಸ್ಥಳ :

ದಿನಾಂಕ:

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 (ಭಾಗ-5)

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 09-10-2025.

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 (ಭಾಗ-5), ದಿನಾಂಕ:08-10-2025 ರ ಸುತ್ತೋಲೆಯಲ್ಲಿನ ಮೂರನೇ ಪ್ಯಾರಾದಲ್ಲಿ **"ಕ್ರಮ ಸಂಖ್ಯೆ: 1 ರ ಉದಾಹರಣೆ ii) ರಲ್ಲಿನ ಪರೆಯನ್, ಪರೆಯ (ಪ್ರವರ್ಗ-ಸಿ)"** ಎಂಬುದನ್ನು "**ಪರೆಯನ್, ಪರೆಯ (ಪ್ರವರ್ಗ-ಬಿ)**" ಎಂದು ಹಾಗೂ ನಮೂನೆ-1 ರಲ್ಲಿ ಪರಿಷ್ಕರಿಸಿದಂತೆ ತಿದ್ದಿ ಓದಿಕೊಳ್ಳತಕ್ಕದ್ದು.

(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

ನಮೂನೆ -1
ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯದವರು ಜಾತಿ ಪ್ರಮಾಣ ಪತ್ರ ಪಡೆಯಲು ಸಲ್ಲಿಸಬೇಕಾದ ಅರ್ಜಿ

ಕ್ರ. ಸಂ.	ಅರ್ಜಿದಾರರ ವಿವರ	
1	ಹೆಸರು	
2	ವಿಳಾಸ	
2	ತಂದೆ-ತಾಯಿ/ಪಾಲಕರ ಹೆಸರು	
3	ಜಾತಿ/ಮೂಲ ಜಾತಿ	
4	ಮೂಲ ಜಾತಿ ಗೊತ್ತಿಲ್ಲದೇ ಇದ್ದಲ್ಲಿ ಆಯ್ಕೆ ಮಾಡಿಕೊಳ್ಳುವ ಪ್ರವರ್ಗವನ್ನು (ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024, ದಿನಾಂಕ:25-08-2025 ರನ್ವಯ) **ಸ್ಪಷ್ಟವಾಗಿ ನಮೂದಿಸುವುದು ಹಾಗೂ ಈ ಅರ್ಜಿಯೊಂದಿಗೆ ಮುಚ್ಚಳಿಕೆ ಪತ್ರ/Affidavit ನೀಡುವುದು.**	
5	ಆಧಾರ್ ಸಂಖ್ಯೆ	
6	ಪಡಿತರ ಚೀಟಿ ಲಭ್ಯವಿದ್ದಲ್ಲಿ ಸಂಖ್ಯೆ	
7	ಮೊಬೈಲ್ ಸಂಖ್ಯೆ	

ನಾನು ನಮೂದಿಸಿರುವ ಮೂಲ ಜಾತಿ ಸುಳ್ಳು ಎಂದು ಕಂಡುಬಂದಲ್ಲಿ ನನ್ನ ವಿರುದ್ಧ ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ

ವರ್ಗಗಳ (ನೇಮಕಾತಿ, ಮುಂತಾದುವುಗಳ ಮೀಸಲಾತಿ) ಅಧಿನಿಯಮ 1990 ತಿದ್ದುಪಡಿ ಅಧಿನಿಯಮ 2024 ರನ್ವಯ ಕ್ರಮ ಜರುಗಿಸಬಹುದು ಮತ್ತು ನಾನು ಪಡೆದಿರುವ ಮೀಸಲಾತಿ, ಇತ್ಯಾದಿ ಸೌಲಭ್ಯಗಳನ್ನು ಹಿಂಪಡೆಯಲು ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ.

ಅರ್ಜಿದಾರರ ಸಹಿ

ಸ್ಥಳ :

ದಿನಾಂಕ:
PR-269

DPAR/128/EGM/2025-DESK1-dparegovsec

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಗ್ರಾಮ-ಒನ್ ಯೋಜನೆಯಡಿ ಕೇಂದ್ರಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣಾ ವಿಧಾನ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 223 ಇಜಿಎಂ 2020, ದಿನಾಂಕ:21.09.2020.
2. ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ ಇವರ ಕಡತ ಸಂಖ್ಯೆ:EDCS/13/SS/2021(59457).

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿನ ಆದೇಶದಲ್ಲಿ ರಾಜ್ಯ ಸರ್ಕಾರದ ಎಲ್ಲಾ ಸೇವೆಗಳನ್ನು ಒಂದೇ ಸೂರಿನಡಿ ತರಲು ಬೆಂಗಳೂರು ಒನ್, ಕರ್ನಾಟಕ ಒನ್ ಮಾದರಿಯಲ್ಲಿ ಗ್ರಾಮೀಣ ಹಂತದಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಪ್ರತಿ ಗ್ರಾಮದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸದರಿ ಗ್ರಾಮ ಒನ್ ಕೇಂದ್ರಗಳು ರಾಜ್ಯ ಸರ್ಕಾರದ ವಿವಿಧ ಯೋಜನೆಗಳು, ರಾಜ್ಯ ವಿವಿಧ ಕೃಷಿ ಮಾರುಕಟ್ಟೆ/ಮಂಡಿ ದರಗಳ ಮಾಹಿತಿ ಪ್ರಚುರಪಡಿಸುವುದರೊಂದಿಗೆ, ಸಕಾಲ ಹಾಗೂ ಸೇವಾ ಸಿಂಧು ಯೋಜನೆಗಳ ಸೇವೆ, ಸಾರ್ವಜನಿಕ ಕುಂದುಕೊರತೆಗಳ ಸ್ವೀಕಾರ ಮತ್ತು ಮಾಹಿತಿ ಹಕ್ಕು ಕಾಯ್ದೆಯಡಿ ಆನ್ ಲೈನ್ ಪೋರ್ಟಲ್ ನಲ್ಲಿ ಅರ್ಜಿಗಳ ಸಲ್ಲಿಕೆಗೆ ಅವಕಾಶ ಕಲ್ಪಿಸುವ ಸಲುವಾಗಿ ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

ಗ್ರಾಮ ಒನ್ ಕೇಂದ್ರಗಳನ್ನು ಸಾರ್ವಜನಿಕ–ಖಾಸಗಿ ಸಹಬಾಗಿತ್ವದ ಮುಖಾಂತರ ಸ್ಥಾಪಿಸಲಾಗುತ್ತಿದ್ದು, ಈ ಯೋಜನೆ ಮುಖಾಂತರ ಸೇವಾ ಸಿಂಧು ಅಡಿಯಲ್ಲಿ ಲಭ್ಯವಿರುವ 800ಕ್ಕೂ ಹೆಚ್ಚು ಸೇವೆಗಳು, ಮಾಹಿತಿ ಹಕ್ಕು ಅಧಿನಿಯಮದಡಿ ಆನ್ ಲೈನ್ ಅರ್ಜಿಗಳ ಸಲ್ಲಿಕೆ, ಯಾವುದೇ ಸಾರ್ವಜನಿಕ ದೂರು ಹಾಗೂ ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸುವ ಇತರೆ ಸೇವೆಗಳನ್ನು ನಾಗರಿಕರಿಗೆ ತಲುಪಿಸಲಾಗುವುದು. ಈ ಕೇಂದ್ರಗಳ ಮೂಲಕ ನಿಗದಿತ ಸಮಯದಲ್ಲಿ ಗುಣಾತ್ಮಕ ಸೇವೆ ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮ-ಒನ್ ಯೋಜನೆಯನ್ನು ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮಗಳಿಗೆ ವಿಸ್ತರಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಕಡತದಲ್ಲಿ ನಿರ್ದೇಶಕರು, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ರಾಜ್ಯ ಸರ್ಕಾರದ ಆಡಳಿತ ಸುಧಾರಣೆ ಮತ್ತು ಸೇವಾ ತಂತ್ರಜ್ಞಾನದ ವೇಗವರ್ಧನೆಗೊಳಿಸಲು, ಸಾರ್ವಜನಿಕರಿಗೆ ಸುಲಭವಾಗಿ ನೈಜವಾದ ಮತ್ತು ಬಲವಾದ

ಸರ್ಕಾರಿ ಸೇವೆಗಳ ಪ್ರವೇಶವನ್ನು ಒದಗಿಸಲು 'ಗ್ರಾಮ ಒನ್' ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯು ಸೇವಾ ಸಿಂಧು ವೇದಿಕೆಯ ಅಡಿಯಲ್ಲಿ 800ಕ್ಕಿಂತ ಹೆಚ್ಚು ಜಿ2ಸಿ ಸೇವೆಗಳ ಸರಳೀಕರಣ ಮತ್ತು ವಿಸ್ತರಣೆಯುಳ್ಳ ಯೋಜನೆಯಾಗಿದ್ದು, ಗ್ರಾಮೀಣ ಭಾಗದ ನಾಗರಿಕರಿಗೆ ಸ್ಥಳದಲ್ಲೇ ಸೇವೆಯನ್ನು ಸಿಗುವಂತೆ ಉದ್ದೇಶಿಸಲಾಗಿರುವುದರಿಂದ ನಿರ್ದೇಶಕರು ಇ-ಆಡಳಿತ ಮತ್ತು ಪದನಿಮಿತ್ತ ನಿರ್ದೇಶಕರು, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿದೇ ಶನಾಲಯ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಗ್ರಾಮ ಒನ್ ಕೇಂದ್ರಗಳನ್ನು 10,000 ಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯುಳ್ಳ ಗ್ರೇಡ್-1 ಗ್ರಾಮ ಪಂಚಾಯ್ತಿಗಳಲ್ಲಿ ಪ್ರತಿ ಗ್ರಾಮ ಪಂಚಾಯ್ತಿಗೆ ಮೂರು, ಮತ್ತು 10,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರೇಡ್-1 ಗ್ರಾಮ ಪಂಚಾಯ್ತಿಗಳಲ್ಲಿ ಎರಡು ಹಾಗೂ ಗ್ರೇಡ್-2 ಗ್ರಾಮಪಂಚಾಯ್ತಿಗಳಲ್ಲಿ ಒಂದು, ಸಾರ್ವಜನಿಕ - ಖಾಸಗಿ ಸಹಭಾಗಿತ್ವದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನುಸಾರ ಪ್ರಾರಂಭಿಸಲು ಕ್ರಮವಹಿಸಲಾಗಿರುತ್ತದೆ. ಸದರಿ ಗ್ರಾಮ ಒನ್ ಕೇಂದ್ರಗಳ ರಚನೆ ಮತ್ತು ನಿರ್ವಹಣೆ ಸಂಬಂಧ ಪ್ರಮಾಣಿತ ಕಾರ್ಯಚರಣಾ ವಿಧಾನವನ್ನು (SOP) ರಚಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಇಜಿಎಂ 2025
ಬೆಂಗಳೂರು, ದಿನಾಂಕ:10ನೇ ಸೆಪ್ಟಂಬರ್ 2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಒನ್ ಯೋಜನೆಯಡಿ ಗ್ರಾಮ ಒನ್ ಕೇಂದ್ರದ ಆಯ್ಕೆ ಪ್ರಕ್ರಿಯೆಗಳನ್ನು ಸುಗಮಗೊಳಿಸಲು, ಸೇವಾ ವಿತರಣೆಯನ್ನು ಸುಧಾರಿಸಲು, ಕಾರ್ಯಾಚರಣೆಗಳು ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕೇಂದ್ರ ಸ್ಥಾಪನೆಗೆ, ಮರು-ಅಧಿಸೂಚನೆಗೆ, ಕೇಂದ್ರದ ಅಮಾನತು ಮತ್ತು ನಿಷ್ಕ್ರಿಯೆಗೊಳಿಸುವಿಕೆಗಾಗಿ ಪ್ರಮಾಣಿತ ಕಾರ್ಯಚರಣಾ ವಿಧಾನಗಳನ್ನು ಈ ಕೆಳಕಂಡಂತೆ ಅನುಸರಿಸಲು ಸೂಚಿಸಿ ಆದೇಶಿಸಿದೆ.

1. **ಗ್ರಾಮ ಒನ್ ಕೇಂದ್ರಗಳ ಸ್ಥಾಪನೆ**

I. ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯವು ಅನುಮೋದಿಸಿದ, ಸ್ಥಾಪಿಸಲು ಬಾಕಿ ಇರುವ ಗ್ರಾಮ ಒನ್ ಕೇಂದ್ರಗಳಿಗೆ, ಕಾರ್ಯಾಚರಣಾ ಪಾಲುದಾರರು ತಂತ್ರಾಂಶದ ಮೂಲಕ ಆಸಕ್ತ ನಾಗರಿಕರಿಂದ ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು.
   i. ಜಿಲ್ಲಾಡಳಿತ ವತಿಯಿಂದ ಅರ್ಜಿ ಆಹ್ವಾನಿಸುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ಕ್ರಮ ವಹಿಸುವುದು.
   ii. ಅರ್ಜಿ ಆಹ್ವಾನಿಸುವ ಅವಧಿಯು ಪ್ರತಿ ಮಾಹೆಯ 1 ನೇ ತಾರೀಖಿನಿಂದ ಪ್ರಾರಂಭವಾಗಿ ಆಯಾ ಮಾಹೆಯ 15 ನೇ ತಾರೀಖಿನವರೆಗೆ ಚಾಲ್ತಿಯಲ್ಲಿರುವುದು.

II. ಕಾರ್ಯಾಚರಣಾ ಪಾಲುದಾರರು ಆನ್ ಲೈನ್ ಮೂಲಕ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಆಯಾ ಮಾಹೆಯ 17ನೇ ತಾರೀಖಿನೊಳಗೆ ಜಿಲ್ಲಾಡಳಿತಕ್ಕೆ ಸಲ್ಲಿಸುವುದು. ಪ್ರತಿಗಳನ್ನು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (EDCS), ಜಿಲ್ಲಾ ಯೋಜನಾ ವ್ಯವಸ್ಥಾಪಕರು (DPM) ಹಾಗೂ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಸಂಯೋಜಕರುಗಳಿಗೂ ಒದಗಿಸುವುದು (Hard and soft copy).

III. ಆಯ್ಕೆಯ ವಿಧಾನ:

   i. ಅರ್ಜಿದಾರರು ಕನಿಷ್ಠ 10+2 ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
   ii. ಗ್ರಾಮ ಒನ್ ಕೇಂದ್ರಗಳು ಪರಸ್ಪರ ಕನಿಷ್ಠ 500 ಮೀಟರ್ ಅಂತರದಲ್ಲಿ ಇರತಕ್ಕದು .
   iii. ಪ್ರಸ್ತುತ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಸಿಎಸ್‌ಸಿ ಪಾಲುದಾರರು (ಫ್ರಾಂಚೈಸಿ) ಹೊಂದಿರುವ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

iv. ಆಯ್ಕೆಯಾದ ಫ್ರಾಂಚೈಸಿಯು ಪೂರ್ಣ ಪ್ರಮಾಣದಲ್ಲಿ ಕೇಂದ್ರದ ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳುವುದು.

v. ಪ್ರಸ್ತಾಪಿತ ಕೇಂದ್ರದ ಕನಿಷ್ಠ ವಿಸ್ತೀರ್ಣ 150 ಚ. ಅಡಿ ಇರತಕ್ಕದು.

vi. ಗ್ರಾಮ ಒನ್ ಫ್ರಾಂಚೈಸಿಗಳ ಆಯ್ಕೆಗೆ ಪರಿಗಣಿಸಬೇಕಾದ ಮಾನದಂಡಗಳು.

ಕ್ರ. ಸಂ.	ಪರಿಗಣಿಸಬೇಕಾದ ಅಂಶಗಳು	ಅಂಕಗಳು
	ಅರ್ಜಿದಾರರು ಅದೇ ಅಧಿಸೂಚಿತ ಸ್ಥಳೀಯ ಗ್ರಾಮ ಪಂಚಾಯತ್ ಪ್ರದೇಶದ ನಿವಾಸಿಯಾಗಿದ್ದರೆ. (ಆಧಾರ್/ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ ದಾಖಲೆಗಳಾಗಿ ಪರಿಗಣಿಸಬಹುದು)	ಹೌದು-5 ಇಲ್ಲ-0
2.	ಮಹಿಳೆಯರು / ಲಿಂಗತ್ವ, ಅಲ್ಪಸಂಖ್ಯಾತರಾಗಿದ್ದರೆ	2
3.	ವಿಶೇಷ ಚೇತನ ಅಭ್ಯರ್ಥಿಗಳಾಗಿದ್ದರೆ (ಸರ್ಕಾರ ನಿಗದಿಸಿರುವ ದಾಖಲೆಗಳನ್ನು ಸಲ್ಲಿಸಬೇಕು)	2
4.	ಆಧಾರ್ ಪ್ರಮಾಣೀಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಾಗಿದ್ದಲ್ಲಿ (ಆಧಾರ್ ಪ್ರಮಾಣ ಪತ್ರ ಪರಿಗಣಿಸುವುದು)	2
5.	ಕಂಪ್ಯೂಟರ್ ಕೋರ್ಸ್ ತರಬೇತಿ ಪಡೆದಿರುವ ಅಭ್ಯರ್ಥಿಗಳಾಗಿದ್ದಲ್ಲಿ (ತರಬೇತಿ ಸಂಸ್ಥೆಗಳಿಂದ ಪಡೆದ ಪ್ರಮಾಣಪತ್ರ)	2
6.	ಪ್ರಸ್ತಾವಿತ ಕೇಂದ್ರದ ಕಟ್ಟಡವನ್ನು ಅಭ್ಯರ್ಥಿಯು ಈಗಾಗಲೇ ಹೊಂದಿದ್ದಲ್ಲಿ (ಮಾಲೀಕತ್ವದ ದಾಖಲೆ ಅಥವಾ ಬಾಡಿಗೆಯ ಕರಾರು ಪತ್ರ, ಭೌತಿಕ ಪರಿಶೀಲನೆ ಆಧರಿಸಿ)	0.5
7.	ಪ್ರಸ್ತಾವಿತ ಕೇಂದ್ರದ ಕಟ್ಟಡವು ಆರ್‌ಸಿಸಿ ಮಾದರಿಯಾಗಿದ್ದಲ್ಲಿ (ಭೌತಿಕ ಪರಿಶೀಲನೆ ಆಧರಿಸಿ)	ಹೌದು -0.5 ಇಲ್ಲ-0
8.	ಪ್ರಸ್ತಾವಿತ ಕೇಂದ್ರದ ಕಟ್ಟಡವು ನೆಲಮಹಡಿಯಾಗಿದ್ದಲ್ಲಿ (ಭೌತಿಕ ಪರಿಶೀಲನೆ ಆಧರಿಸಿ)	ಹೌದು-0.5 ಇಲ್ಲ-0
9.	ಐಟಿ ಸೌಕರ್ಯಗಳ ಲಭ್ಯತೆ (ಕಂಪ್ಯೂಟರ್ ಸಿಸ್ಟಮ್, ಪ್ರಿಂಟರ್, ಬಯೋ-ಮೆಟ್ರಿಕ್ ಸಾಧನ, ಇಂಟರ್ನೆಟ್ ಸಂಪರ್ಕ ಮತ್ತು ಯುಪಿಎಸ್ ಹೊಂದಿದ್ದರೆ, ಭೌತಿಕ ಪರಿಶೀಲನೆ ಆಧರಿಸಿ)	ಹೌದು-0.5 ಇಲ್ಲ-0
10.	ನಾಗರಿಕ ಸೌಕರ್ಯಗಳ ಲಭ್ಯತೆ (ನಾಗರಿಕ ಕುಳಿತುಕೊಳ್ಳುವ ಕುರ್ಚಿಗಳು, ಫ್ಯಾನ್, ಕುಡಿಯುವ ನೀರಿನ ಲಭ್ಯತೆ, ಭೌತಿಕ ಪರಿಶೀಲನೆ ಆಧರಿಸಿ)	ಹೌದು-0.5 ಇಲ್ಲ-0
11.	ಪ್ರಸ್ತಾವಿತ ಕೇಂದ್ರವು ಯಾವುದೇ ಸಕ್ರಿಯ ಗ್ರಾಮ ಒನ್ ಕೇಂದ್ರವಿಲ್ಲದ ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಳ್ಳಿಯಲ್ಲಿ ಸ್ಥಾಪನೆಗೆ ಪ್ರಸ್ತಾವನೆಯಾಗಿದ್ದಲ್ಲಿ	2.5
	ಒಟ್ಟು ಗರಿಷ್ಠ ಅಂಕಗಳು	**18**

ಅಭ್ಯರ್ಥಿಗಳ ನಡುವಿನ ಅಂಕಗಳು ಸಮಾನವಾಗಿದ್ದಲ್ಲಿ, ಹೆಚ್ಚಿನ ಶೈಕ್ಷಣಿಕ ಅರ್ಹತೆ ಹೊಂದಿರುವ ಅರ್ಜಿದಾರರನ್ನು ಆಯ್ಕೆಗೊಳಿಸುವುದು. ಶೈಕ್ಷಣಿಕ ಅರ್ಹತೆಯು ಸಮಾನವಾಗಿದ್ದರೆ, ಮೊದಲು ಅರ್ಜಿ ಸಲ್ಲಿಸಿದ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸುವುದು.

IV. ಜಿಲ್ಲಾಡಳಿತವು ಆಯಾ ತಿಂಗಳ ಕೊನೆಯ ಕೆಲಸದ ದಿನದೊಳಗೆ ಫ್ರಾಂಚೈಸಿಯ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ಮತ್ತು ಫ್ರಾಂಚೈಸಿಯ ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸುವುದು.

V. ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DEGS) ಯಿಂದ ಆಯ್ಕೆಗೆ ಪರಿಗಣಿಸಲಾದ ಎಲ್ಲಾ ಅರ್ಜಿದಾರರ ಪಟ್ಟಿಯು ಗರಿಷ್ಠ ಮೂರು ತಿಂಗಳ ಮಾನ್ಯತೆಯನ್ನು ಹೊಂದಿದ್ದು, ಮೊದಲು ಆಯ್ಕೆಯಾದ ಫ್ರಾಂಚೈಸಿಯು ನಿಗದಿತ ಕಾಲಮಿತಿಯೊಳಗೆ ನಿಯಮಾನುಸಾರ ಕೇಂದ್ರ ಸ್ಥಾಪಿಸಲು ವಿಫಲವಾದಲ್ಲಿ, ಪಡೆದ ಅಂಕಗಳನುಸಾರ ಮಾನ್ಯತೆಯಲ್ಲಿರುವ ಪಟ್ಟಿಯಲ್ಲಿನ ನಂತರದ ಅರ್ಹ ಅಭ್ಯರ್ಥಿಯನ್ನು ಫ್ರಾಂಚೈಸಿ ಆಗಿ ಆಯ್ಕೆ ಮಾಡುವುದು.

VI. ಆಯ್ಕೆಯಾದ ಅಭ್ಯರ್ಥಿಯು ಅಧಿಕೃತ ಆಯ್ಕೆ ಪಟ್ಟಿ ಪ್ರಕಟವಾದ 45 ದಿನಗಳೊಳಗಾಗಿ ನಿಯಮಗಳ ಪ್ರಕಾರ ಕೇಂದ್ರವನ್ನು ಸ್ಥಾಪಿಸತಕ್ಕದ್ದು, ನಿಗದಿತ ಕಾಲಮಿತಿಯಲ್ಲಿ ಕೇಂದ್ರ ಸ್ಥಾಪನೆ ಮಾಡಲು ವಿಫಲರಾದ ಅಭ್ಯರ್ಥಿಗಳ ಆಯ್ಕೆಯು ಸ್ವಯಂಚಾಲಿತವಾಗಿ ರದ್ದಾಗುವುದು.

2. <u>ಕೇಂದ್ರಗಳ ನಿಷ್ಕ್ರಿಯಗೊಳಿಸುವಿಕೆ:</u>

ಕೇಂದ್ರವನ್ನು ಸ್ಥಗಿತಗೊಳಿಸುವ / ನಿಷ್ಕ್ರಿಯೆಗೊಳಿಸುವ ಸಂದರ್ಭಗಳು:

I. ಗ್ರಾಮ ಒನ್ ಕೇಂದ್ರದಲ್ಲಿ ಕನಿಷ್ಠ ವಹಿವಾಟುಗಳ ಸಂಖೆ ಯನ್ನು ದಾಖಲಿಸದಿದ್ದಲ್ಲಿ.
II. ಫ್ರಾಂಚೈಸಿಯ ರಾಜೀನಾಮೆ ಅಂಗೀಕೃತಗೊಂಡಿದ್ದಲ್ಲಿ.
III. ಫ್ರಾಂಚೈಸಿ ಮರಣ ಹೊಂದಿದ್ದಲ್ಲಿ.
IV. ಕೇಂದ್ರ ಅಮಾನತುಗೊಂಡಿದ್ದಲ್ಲಿ.

I. **<u>ವಹಿವಾಟು ಆಧಾರಿತವಾಗಿ ನಿಷ್ಕ್ರಿಯ ಕೇಂದ್ರಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಗುರುತಿಸುವ ವಿಧಾನ</u>**

ನಿಷ್ಕ್ರಿಯ ಕೇಂದ್ರಗಳ ಕನಿಷ್ಠ ವಹಿವಾಟುಗಳು	ಆಯಾ ಜಿಲ್ಲೆಗಳಲ್ಲಿ ಒಂದು ತಿಂಗಳನಲ್ಲಿ ನಡೆದ ಒಟ್ಟು ವಹಿವಾಟುಗಳ ಸಂಖ್ಯೆ ಆಯಾ ತಿಂಗಳಿಗೆ ಶೂನ್ಯ ವಹಿವಾಟುಗಳನ್ನು ದಾಖಲಿಸಿಲ್ಲದ ಕೇಂದ್ರಗಳ ಒಟ್ಟು ಸಂಖ್ಯೆ	X30%

i. ಮೇಲಿನ ಸೂತ್ರದಡಿಯಲ್ಲಿ ಪಡೆಯಲಾದ ಕನಿಷ್ಠ ವಹಿವಾಟಿನ ಸಂಖ್ಯೆಗಿಂತ ಕಡಿಮೆ ವಹಿವಾಟುಗಳನ್ನು ದಾಖಲಿಸಿರುವ ಕೇಂದ್ರವನ್ನು ನಿಷ್ಕ್ರಿಯವೆಂದು ಗುರುತಿಸಿ, ಸದರಿ ಕೇಂದ್ರಗಳಿಗೆ ಜಿಲ್ಲಾಡಳಿತವು/DeGs ನೋಟೀಸ್ ಜಾರಿಗೊಳಿಸುವುದು, ಮತ್ತು ಉತ್ತರಿಸಲು 7 ಕೆಲಸದ ದಿನ ಕಾಲಾವಕಾಶ ನೀಡುವುದು.
ii. ನೋಟಿಸ್ ಗೆ ಉತ್ತರಿಸಿದ ನಿಷ್ಕ್ರಿಯ ಕೇಂದ್ರಗಳ ಫ್ರಾಂಚೈಸಿ ಮನವಿಯನ್ನು 7 ಕೆಲಸದ ದಿನದೊಳಗಾಗಿ ವಿಲೇಗೊಳಿಸುವುದು. ಉತ್ತರಿಸಲು ವಿಫಲವಾದ/ ಸೂಕ್ತ ಸಮಾಜಯಿಷಿ ನೀಡದ ಫ್ರಾಂಚೈಸಿ ಕೇಂದ್ರವನ್ನು ನಿಷ್ಕ್ರಿಯೆಗೊಳಿಸಲು ಕ್ರಮವಹಿಸುವುದು ಹಾಗೂ ನಿಷ್ಕ್ರಿಯೆಗೊಳಿಸಿದ ಬಗ್ಗೆ ಅಗತ್ಯ ಆದೇಶವನ್ನು ಜಿಲ್ಲಾಡಳಿತ/DeGs ನಿಂದ ಹೊರಡಿಸುವುದು

II. **<u>ಫ್ರಾಂಚೈಸಿಯ ರಾಜೀನಾಮೆ ಪ್ರಕರಣ.</u>**

ಫ್ರಾಂಚೈಸಿಯು ತನ್ನ ಗ್ರಾಮ ಒನ್ ಕೇಂದ್ರವನ್ನು ಸ್ಥಗಿತಗೊಳಿಸಲು ಇಚ್ಛಿಸಿದಲ್ಲಿ ನೇರವಾಗಿ ಸಂಬಂಧಪಟ್ಟ ಜಿಲ್ಲಾಡಳಿತ/DeGs ಗೆ ರಾಜೀನಾಮೆಯನ್ನು ಸಲ್ಲಿಸುವುದು, ರಾಜೀನಾಮೆಯನ್ನು ಕೆಲಸದ 7 ದಿನಗಳಲ್ಲಿ ವಿಲೇಗೊಳಿಸಿ, ಜಿಲ್ಲಾಡಳಿತ/DeGs ವತಿಯಿಂದ ಅಗತ್ಯ ಆದೇಶವನ್ನು ಹೊರಡಿಸುವುದು.

III. **<u>ಫ್ರಾಂಚೈಸಿ ಮರಣ ಪ್ರಕರಣ.</u>**

ಗ್ರಾಮ ಒನ್ ಫ್ರಾಂಚೈಸಿಯ ಮರಣವಾದಲ್ಲಿ ಸದರಿ ಕೇಂದ್ರದ ಮಾಲೀಕತ್ವವನ್ನು ವರ್ಗಾಯಿಸುವಂತಿಲ್ಲ ಹಾಗೂ ಸ್ಥಗಿತಗೊಳಿಸುವುದು.

IV . ಕೇಂದ್ರಗಳ ಅಮಾನತು ಪ್ರಕರಣ.

I. ಈ ಕೆಳಕಂಡ ಸಂದರ್ಭಗಳಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಅಮಾನತುಗೊಳಿಸ ಬಹುದಾಗಿದೆ.

i. ಫ್ರಾಂಚೈಸಿ ಕೇಂದ್ರದಲ್ಲಿ ನಿಗದಿತ ಶುಲ್ಕಕ್ಕಿಂತ ಅಧಿಕ ಶುಲ್ಕವನ್ನು ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಲ್ಲಿ.

ii. ಕೇಂದ್ರದ ಸ್ಥಾಪನೆಯಲ್ಲಿ ಬ್ರ್ಯಾಂಡಿಂಗ್ ಮಾರ್ಗಸೂಚಿಗಳು ಪಾಲನೆಯಾಗದಿದ್ದಲ್ಲಿ.

iii. ಪೂರ್ವಾನುಮತಿಯಿಲ್ಲದೇ ನಿಗದಿತ ಕೆಲಸದ ಸಮಯದಲ್ಲಿ ಕೇಂದ್ರಗಳು ಸ್ಥಗಿತವಾಗಿದ್ದಲ್ಲಿ,

iv. ಕೇಂದ್ರದಲ್ಲಿ ನಾಗರಿಕರಿಗೆ ಸೇವೆಗಳನ್ನು ನಿರಾಕರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಲ್ಲಿ,

v. ಕೇಂದ್ರದಲ್ಲಿ ನಿಯಮ ಬಾಹಿರ ಚಟುವಟಿಕೆಗಳು ಮೇಲ್ನೋಟಕ್ಕೆ ಕಂಡುಬಂದಲ್ಲಿ.

II. ಮೇಲ್ಕಂಡ ಸಂದರ್ಭಗಳಲ್ಲಿ ಜಿಲ್ಲಾಡಳಿತವು/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ (DeGs) ಸದರಿ ಕೇಂದ್ರಗಳನ್ನು ಅಮಾನತ್ತಿನಲ್ಲಿರಿಸಿ, ಸದರಿ ಕೇಂದ್ರದ ಲಾಗಿನ್ ID ಗಳನ್ನು ನಿಷ್ಕ್ರಿಯಗೊಳಿಸಲು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯಕ್ಕೆ (EDCS) ಕೋರುವುದು.

III. ಜಿಲ್ಲಾ ಯೋಜನಾ ವ್ಯವಸ್ಥಾಪಕರು (DPM) ಗಳು ಅಮಾನತ್ತುಗೊಂಡ ಕೇಂದ್ರಗಳ ಬಗ್ಗೆ ವಿವರವಾದ ವರದಿಯನ್ನು ಅಗತ್ಯ ಶಿಫಾರಸ್ಸುಗಳೊಂದಿಗೆ 10 ಕೆಲಸದ ದಿನಗಳೊಳಗೆ ಸಂಬಂಧಪಟ್ಟ ಜಿಲ್ಲಾಡಳಿತಕ್ಕೆ/ ಜಿಲ್ಲಾ ಇ-ಗವರ್ನೆನ್ಸ್ ಸೊಸೈಟಿ(DEGS) ಒದಗಿಸುವುದು.

IV. ಜಿಲ್ಲಾ ಯೋಜನಾ ವ್ಯವಸ್ಥಾಪಕರು (DPM) ಗಳು ಸಲ್ಲಿಸಿದ ವರದಿಯ ಬಗ್ಗೆ ಸಂಬಂಧಪಟ್ಟ ಜಿಲ್ಲಾಡಳಿತವು 10 ಕೆಲಸದ ದಿನಗಳೊಳಗೆ ಕ್ರಮ ವಹಿಸಿ ಸೂಕ್ತ ಆದೇಶ ಹೊರಡಿಸುವುದು. ಒಟ್ಟು 20 ಕೆಲಸದ ದಿನಗಳಲ್ಲಿ ಅಮಾನತ್ತುಗೊಂಡ ಕೇಂದ್ರಗಳ ಬಗ್ಗೆ ಯಾವುದೇ ನಿರ್ಣಯವಾಗದಿದ್ದ ಪಕ್ಷದಲ್ಲಿ ಸದರಿ ಕೇಂದ್ರಗಳನ್ನು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (EDCS) ಕಛೇರಿಯು ಪುನಃ ಸಕ್ರಿಯಗೊಳಿಸುವುದು.

V. ಅಮಾನತ್ತುಗೊಳಿಸಲಾದ ಕೇಂದ್ರಗಳನ್ನು ನಿಷ್ಕ್ರಿಯಗೊಳಿಸಲು ತೀರ್ಮಾನಿಸಿದ್ದಲ್ಲಿ ಕೇಂದ್ರವನ್ನು ನಿಷ್ಕ್ರಿಯಗೊಳಿಸುವುದು ಇಲ್ಲವಾದಲ್ಲಿ ಸಕ್ರಿಯಗೊಳಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ. ವೆಂಕಟೇಶ್)
ಸರ್ಕಾರದ ಉಪ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

PR-270

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಗದಗ ಜಿಲ್ಲೆಯ ಗದಗ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಕಡತ ಸಂಖ್ಯೆ: ಲಾ-ಎಲ್‌ಸಿಎಲ್/157/2024.
2. ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/157/2024, ದಿನಾಂಕ: 03.10.2025.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: ಜಾವಕ ಸಂಖ್ಯೆ:4965/2025, ದಿನಾಂಕ: 18.10.2025.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಕಡತದಲ್ಲಿ ಗದಗ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಲು ಪ್ರಸ್ತಾಪಿಸಿಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಗದಗ ಜಿಲ್ಲೆಯ ಗದಗ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ ಪರಿಶೀಲಿಸುತ್ತಿರುವುದರಿಂದ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 18.310.2025 ಪತ್ರದಲ್ಲಿ ಗದಗ ಜಿಲ್ಲೆಯ ಗದಗ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಬಹುದಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಜಿಲ್ಲೆ ಇವರ ಅಭಿಪ್ರಾಯದನ್ವಯ ಹಾಗೂ ಗದಗ ತಾಲ್ಲೂಕಿನ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/157/2024,</u>
<u>ಬೆಂಗಳೂರು, ದಿನಾಂಕ : 30-10-2025</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗದಗ ಜಿಲ್ಲೆಯ ಗದಗ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-271

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹಾವೇರಿ ಜಿಲ್ಲೆಯ ಹಾನಗಲ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

<u>ಓದಲಾಗಿದೆ</u>:

1. ಕಡತ ಸಂಖ್ಯೆ: ಲಾ-ಎಲ್‌ಸಿಎಲ್/125/2024.
2. ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/125/2024, ದಿನಾಂಕ : 04-10-2025.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: ಆಡಳಿತ/3541/2025, ದಿನಾಂಕ : 15-09-2025.

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಕಡತದಲ್ಲಿ ಹಾನಗಲ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಲು ಪ್ರಸ್ತಾಪಿಸಿಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 15-09-2025ರ ಪತ್ರದಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಅವಶ್ಯಕತೆ ಇರುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಜಿಲ್ಲೆ ಇವರ ಅಭಿಪ್ರಾಯದನ್ವಯ ಹಾಗೂ ಹಾನಗಲ್ ತಾಲ್ಲೂಕಿನ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/125/2024,</u>
<u>ಬೆಂಗಳೂರು, ದಿನಾಂಕ : 11-11-2025</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆಯ ಹಾನಗಲ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-272

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳಮೀಸಲಾತಿ (ವರ್ಗೀಕರಣ) ಕಲ್ಪಿಸುವ ಬಗ್ಗೆ.

ಪ್ರಸ್ತಾವನೆ:

1. ಕರ್ನಾಟಕ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯವು CA No 2317 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಂಜಾಬ್ ರಾಜ್ಯ ಮತ್ತು ಇತರರು Vs ದೇವಿಂದರ್ ಸಿಂಗ್ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಅನ್ವಯ ಪರಿಶಿಷ್ಟ ಜಾತಿಗಳ ಒಳಮೀಸಲಾತಿ (ವರ್ಗೀಕರಣ) ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಆಯೋಗ ವಿಚಾರಣಾ ಕಾಯ್ದೆ 1952 ರಂತೆ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಇವರ ನೇತೃತ್ವದ ಏಕ ಸದಸ್ಯ ಆಯೋಗವನ್ನು ಸರ್ಕಾರದ ಆದೇಶ ಸಂಖ್ಯೆ: SWD/SLP/8 2024(P-1), ದಿನಾಂಕ: 12-11-2024 ಮತ್ತು ದಿನಾಂಕ: 03-12-2024 ರಂತೆ ರಚಿಸಿ ಆದೇಶಿಸಲಾಗಿದೆ. ಅದರಂತೆ, ಸದರಿ ಆಯೋಗವು ದಿನಾಂಕ: 04-08-2025 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ಆಯೋಗವು ಪರಿಶಿಷ್ಟ ಜಾತಿಗಳನ್ನು ಪ್ರವರ್ಗ ಎ, ಬಿ, ಸಿ, ಡಿ ಮತ್ತು ಇ ಎಂದು 5 ಗುಂಪುಗಳಾಗಿ ವರ್ಗೀಕರಿಸಿದ್ದು, ಸದರಿ ಆಯೋಗದ ವರದಿಯನ್ನು ಪರಿಶೀಲಿಸಿ, ಸೂಕ್ತ

ನಿರ್ಧಾರಕ್ಕಾಗಿ, ಸಚಿವ ಸಂಪುಟದ ಮುಂದೆ ಮಂಡಿಸಲಾಗಿದೆ. ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ/ವರ್ಗೀಕರಣದ ಬಗ್ಗೆ ನ್ಯಾಯಮೂರ್ತಿ ಡಾ: ಹೆಚ್.ಎನ್. ನಾಗಮೋಹನ್ ದಾಸ್ ಆಯೋಗವು ನೀಡಿರುವ ವರದಿಯನ್ನು ಕೂಲಂಕುಷವಾಗಿ ಚರ್ಚಿಸಿ, ಕೆಲವು ಮಾರ್ಪಾಡುಗಳೊಂದಿಗೆ ಸದರಿ ವರದಿಯನ್ನು ಸಚಿವ ಸಂಪುಟವು ಒಪ್ಪಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024,
ಬೆಂಗಳೂರು ದಿನಾಂಕ: 25-8-2025

1) ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಅಗತ್ಯ ಮಾರ್ಪಾಡುಗಳೊಂದಿಗೆ ಅಂಗೀಕರಿಸಿ, ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳನ್ನು 5 ಪ್ರವರ್ಗಗಳ ಬದಲಾಗಿ ಪ್ರವರ್ಗ- ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಎಂದು 3 ಪ್ರವರ್ಗಳಾಗಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಶೇ.17% ಮೀಸಲಾತಿಯನ್ನು ಪ್ರವರ್ಗ- ಎ ರಲ್ಲಿನ ಸಮುದಾಯಗಳಿಗೆ ಶೇ.6%, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇ. 6% ಮತ್ತು ಪ್ರವರ್ಗ –ಸಿ ರಲ್ಲಿನ ಸಮುದಾಯಗಳಿಗೆ ಶೇ.5% ರಷ್ಟು ನಿಗಧಿಪಡಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ. (ವಿವರಗಳನ್ನು ಅನುಬಂಧ-1, 2 ಮತ್ತು 3 ರಲ್ಲಿ ನೀಡಲಾಗಿದೆ.)
2) ಆಯೋಗದ ವರದಿಯಲ್ಲಿನ ಪ್ರವರ್ಗ- ಇ ರಲ್ಲಿನ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಈ 3 ಸಮುದಾಯಗಳು ತಮ್ಮ ಮೂಲ ಜಾತಿಯನ್ನು ತಿಳಿಸದೇ ಇರುವುದರಿಂದ ಸದರಿ 3 ಜಾತಿಗಳು ಅನುಬಂಧಗಳಲ್ಲಿರುವ ಪ್ರವರ್ಗ-ಎ ಅಥವಾ ಪ್ರವರ್ಗ-ಬಿ ಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಪಡೆಯಬಹುದು.

3) ರಾಜ್ಯ ಸಿವಿಲ್ ಸೇವೆಗಳ ಹುದ್ದೆಗಳಿಗೆ ಒಳಮೀಸಲಾತಿ ಹಿನ್ನೆಲೆಯಲ್ಲಿ ತಡೆಹಿಡಿಯಲಾದ ನೇರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕ್ರಮವಹಿಸುವುದು. ಎಲ್ಲಾ ಇಲಾಖೆಗಳು ಮತ್ತು ಅವುಗಳ ಅಧೀನದ ಎಲ್ಲಾ ನಿಗಮ/ಮಂಡಳಿ/ಸಂಸ್ಥೆಗಳಲ್ಲಿ ಮುಂಬಡ್ತಿ ಪ್ರಕ್ರಿಯೆಯನ್ನೂ ಸಹ ಮುಂದುವರೆಸಬಹುದಾಗಿದೆ.
4) ಉದ್ಯೋಗಳ ನೇಮಕಾತಿಯಲ್ಲಿ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಆಯಾ ನೇಮಕಾತಿಗಳಿಗೆ ನಿಗದಿಪಡಿಸಿರುವ ಗರಿಷ್ಟ ವಯೋಮಿತಿಯಲ್ಲಿ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಅಗತ್ಯ ಕ್ರಮವಹಿಸುವುದು.
5) ಹೊಸ ದತ್ತಾಂಶ ಅಥವಾ ಮಾಹಿತಿ ಬಂದಾಗ ಅಗತ್ಯ ಮಾರ್ಪಾಡುಗಳನ್ನು ಮಾಡಲು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಅಧಿಕಾರ ನೀಡುವ ಬಗ್ಗೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಅಧಿನಿಯಮ, 2002ಕ್ಕೆ ಸೂಕ್ತ ತಿದ್ದುಪಡಿ ಮಾಡಲಾಗುವುದು.
6) ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆಯನ್ನು ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿಕೊಂಡು, ಕಾಲಕಾಲಕ್ಕೆ ಈ ಜಾತಿಗಳನ್ನು ಅಧ್ಯಯನ ಮಾಡಿ, ವರದಿ ನೀಡಲು ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗವನ್ನು ರಚಿಸಲಾಗುವುದು.
7) ಒಳ ಮೀಸಲಾತಿ ಹೋರಾಟಗಾರರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಲು ನಿರ್ಧರಿಸಲಾಗಿದ್ದು, ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಅಪರಾಧ ಪ್ರಕರಣಗಳ ಕುರಿತು ಪರಿಶೀಲಿಸಿ ತುರ್ತಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ

ಬಗ್ಗೆ ಸದರಿ ವಿಷಯಕ್ಕೆ ಸಂಬಂಧಿಸಿದ ಸಚಿವ ಸಂಪುಟ ಉಪಸಮಿತಿಯು ಕ್ರಮವಹಿಸುವುದು. (ಗೃಹ ಇಲಾಖೆ ಈ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು)

ಮೇಲ್ಕಂಡ ಆದೇಶವನ್ನು ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ/658/2025, ದಿನಾಂಕ: 19-08-2025ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ವಿ.ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಸಕ ಇ /8/ ಎಸ್‌ಎಲ್‌ಪಿ/2024, ಬೆಂಗಳೂರು
ದಿನಾಂಕ: 25-8-2025ಕ್ಕೆ ಅನುಬಂಧ-1
ಪ್ರವರ್ಗ- ಎ ರಲ್ಲಿನ ಸಮುದಾಯಗಳು ಮತ್ತುಮೀಸಲಾತಿ ಪ್ರಮಾಣ- ಶೇ.6%

SL.NO	Caste Code	Caste name
1	22	Bhambi ,Bhambhi, Asadaru , Asodi , Chamadia ,Chamar, Chambhar,Chamgar, Haralayya,Harali,Khalpa,Machigor,Mochigar,Madar,Madig, Mochi ,Muchi ,Telegu Mochi ,Kamati Mochi ,Ranigar, Rohidas ,Rohit , Samgar
2	28	Chandala
3	32	Dhor ,Kakkayya ,Kankayya
4	40	Halsar,Haslar ,Hulasvar ,Halasvar
5	42	Hasla
6	48	Kadaiyan
7	50	Kepmaris
8	51	Kolupulvandlu
9	56	Kudumban
10	61	Madiga
11	72	Mang ,Matang ,Minimadig
12	76	Mavilan
13	88	Panchama
14	89	Panniandi
15	93	Samagara
16	94	Samban

(ಎಸ್.ವಿ.ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಸಕ ಇ /8/ ಎಸ್‌ಎಲ್‌ಪಿ/2024,
ಬೆಂಗಳೂರು ದಿನಾಂಕ: 25-8-2025ಕ್ಕೆ ಅನುಬಂಧ-2

ಪ್ರವರ್ಗ- ಬಿ ರಲ್ಲಿನ ಸಮುದಾಯಗಳು ಮತ್ತು ಮೀಸಲಾತಿ ಪ್ರಮಾಣ- ಶೇ.6%

SL.NO	Caste Code	Caste name
1	7	Anamuk
2	8	Aray Mala
3	10	Arwa Mala
4	15	Balagai
5	27	Chalavadi ,Chalvadi ,Channayya
6	86	Pallan
7	44	Holaya ,Holer ,Holeya
8	63	Mahyavanshi ,Dhed ,Vankar, Maru Vankar
9	65	Mala
10	67	Mala Hannai
11	68	Mala Jangam
12	69	Mala Masti
13	70	Mala Sale ,Netkani
14	62	Mahar,Taral ,Dhegu Megu
15	78	Moger
16	80	Mundala
17	90	Paraiyan ,Paraya
18	92	Raneyar
19	101	Valluvan

(ಎಸ್.ವಿ.ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಸಕ ಇ /8/ಎಸ್‌ಎಲ್‌ಪಿ/2024, ಬೆಂಗಳೂರು ದಿನಾಂಕ: 25-8-2025ಕ್ಕೆ ಅನುಬಂಧ-3

ಪ್ರವರ್ಗ- ಸಿ ರಲ್ಲಿನ ಸಮುದಾಯಗಳು ಮತ್ತು ಮೀಸಲಾತಿ ಪ್ರಮಾಣ- ಶೇ.5%

SL.NO	Caste Code	Caste name
1	4	Adiya (in Coorg district)
2	5	Ager
3	6	Ajila
4	9	Arunthathiyar
5	11	Baira

6	12	Bakad
7	14	Bakuda
8	16	Bandi
9	13	Bant (in Belgaum, Bijapur, Dharwar and North Kanara districts)
10	17	Banjara ,Lambani ,Lambada ,Lambadi ,Lamani ,Sugali ,Sukali
11	18	Bathada
12	19	Budga Jangam,Beda Jangam,
13	20	Bellara
14	21	Bhangi, ,Mehtar,Olgana,Rukhi ,Malkana Halalkhor ,Lalbegi ,Balmiki ,Korar,Zadmalli
15	23	Bhovi ,Od,Odde ,Vaddar ,Waddar ,Voddar ,Woddar ,Bovi (Non-Besta) ,Kalluvaddar ,Mannuvaddar
16	24	Bindla
17	25	Byagara
18	26	Chakkiliyan
19	29	Chenna Dasar ,Holaya Dasar
20	30	Dakkal ,Dokkalwar
21	31	Dakkaliga
22	33	Dom, Dombara ,Paidi ,Pano
23	34	Ellamalwar,Yellammalawandlu
24	35	Ganti Chores
25	36	Garoda,Garo
26	37	Godda
27	38	Gosangi
28	39	Halleer
29	41	Handi Jogis
30	43	Holar ,Valhar
31	45	Holeya Dasari
32	46	Jaggali
33	47	Jambuvulu
34	49	Kalladi
35	52	Koosa
36	53	Koracha ,Korachar
37	54	Korama,Korava ,Koravar
38	55	Kotegar ,Metri
39	57	Kuravan
40	58	Lingader
41	59	Machala
42	60	Madari

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

43	64	Maila
44	66	Mala Dasari
45	71	Mala Sanyasi
46	73	Mang Garudi,Mang Garodi
47	74	Manne
48	75	Masthi
49	77	Meghval ,Menghvar
50	79	Mukri
51	81	Nadia ,Hadi
52	82	Nalkadaya
53	83	Nalakeyava
54	84	Nayadi
55	85	Pale
56	87	Pambada
57	91	Paravan
58	95	Sapari
59	96	Sillekyathas
60	97	Sindhollu ,Chindollu
61	98	Sudugadu Siddha
62	99	Thoti
63	100	Tirgar ,Tirbanda

(ಎಸ್.ವಿ.ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

PR-273

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH